ಸಂಪುಟ 01 | ಸಂಚಿಕೆ 216 | ಗುರುವಾರ 02 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೊ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಯುಎಫ್‌ಓ ದಿನ**
ಅಪರಿಚಿತ ಹಾರುವ ತಟ್ಟೆಗಳು (ಗಈಔ) ಮತ್ತು ಬಾಹ್ಯಾಕಾಶದಲ್ಲಿನ ಅನ್ಯಗ್ರಹ ಜೀವಿಗಳ ಅಸ್ತಿತ್ವದ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**2) ವಿಶ್ವ ಕ್ರೀಡಾ ಪತ್ರಕರ್ತರ ದಿನ**
ಕ್ರೀಡಾ ಪತ್ರಿಕೋದ್ಯಮದ ಮಹತ್ವವನ್ನು ಸಾರಲು ಮತ್ತು ಈ ಕ್ಷೇತ್ರದಲ್ಲಿ ದುಡಿಯುವವರನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**3) ಬಾಲ ಗಂಗಾಧರ್ ತಿಲಕ್ ಜನ್ಮದಿನ**
ಭಾರತೀಯ ಸ್ವಾತಂತ್ರ್ಯ ಹೋರಾಟಗಾರ, 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದ ಪ್ರಖ್ಯಾತ ನಾಯಕ ಲೋಕಮಾನ್ಯ ಬಾಲಗಂಗಾಧರ್ ತಿಲಕ್ ಅವರು 1856ರ ಜುಲೈ 2 ರಂದು ಜನಿಸಿದರು.

## ಸುಭಾಷಿತ

ಶಿಕ್ಷಣವೆಂದರೆ, ಮನಸ್ಸು, ದೇಹ, ಬುದ್ಧಿಗಳೊಂದಿಗೆ ದೊರೆಯುವ ಸಂಸ್ಕಾರ

–ಹರ್ಡೀಕರ ಮಂಜಪ್ಪ–

## ವೈದ್ಯರು ದಿನ ಮತ್ತು ಚಾರ್ಟರ್ಡ್ ಅಕೌಂಟೆಂಟ್‌ಗಳ ದಿನ

# ಪ್ರಧಾನಿ ಮೋದಿ ಶುಭಾಶಯ



**ನವದೆಹಲಿ: ವೈದ್ಯರ ದಿನ ಮತ್ತು ಚಾರ್ಟರ್ಡ್ ಅಕೌಂಟೆಂಟ್‌ಗಳ ದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ವೈದ್ಯರು ಮತ್ತು ಚಾರ್ಟರ್ಡ್ ಖಾತೆದಾರರಿಗೆ ಶುಭಾಶಯ ಕೋರಿದರು ಮತ್ತು ಅವರ ದಣಿವರಿಯದ ಪ್ರಯತ್ನಗಳು ಅಸಂಖ್ಯಾತ ಜನರ ವಿಶ್ವಾಸ ಮತ್ತು ಕೃತಜ್ಞತೆಯನ್ನು ಗಳಿಸಿವೆ ಎಂದರು.**

ವಿಕಸಿತ್ ಭಾರತ ನಿರ್ಮಾಣದತ್ತ ಸರ್ಕಾರ ಕೆಲಸ ಮಾಡುತ್ತಿರುವಾಗ, ದೇಶದ ವೈದ್ಯರು ತಡೆಗಟ್ಟುವ ಆರೋಗ್ಯ ರಕ್ಷಣೆಯನ್ನು ಉತ್ತೇಜಿಸುವಲ್ಲಿ, ವೈದ್ಯಕೀಯ ಸಂಶೋಧನೆಯನ್ನು ಮುನ್ನಡೆಸುವಲ್ಲಿ, ನಾವೀನ್ಯತೆಯನ್ನು ಅಳವಡಿಸಿಕೊಳ್ಳುವಲ್ಲಿ ಮತ್ತು ಎಲ್ಲರಿಗೂ ಕೈಗೆಟುಕುವ, ಪ್ರವೇಶಿಸಬಹುದಾದ ಆರೋಗ್ಯ ಸೇವೆಯನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸುತ್ತಾರೆ ಎಂದು ಮೋದಿ ಪ್ರತ್ಯೇಕ ಸಂದೇಶಗಳಲ್ಲಿ ತಿಳಿಸಿದ್ದಾರೆ. ದೇಶವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವತ್ತ ಸಾಗುತ್ತಿರುವಾಗ, ಸಿಎಗಳ ಪ್ರಯತ್ನಗಳು ಉದ್ಯಮಗಳು ಅಭಿವೃದ್ಧಿ ಹೊಂದಲು ಮತ್ತು ಎಲ್ಲರಿಗೂ ಅವಕಾಶಗಳು ವಿಸ್ತರಿಸಬಹುದಾದ ವಾತಾವರಣವನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ಪ್ರಧಾನಿ ಹೇಳಿದರು.

ವೈದ್ಯರ ದಿನದಂದು, ನಮ್ಮ ಸಮರ್ಪಿತ ವೈದ್ಯರಿಗೆ ಶುಭಾಶಯಗಳು, ಅವರ ಕಠಿಣ ಪರಿಶ್ರಮ, ಸಹಾನುಭೂತಿ ಮತ್ತು ಬದ್ಧತೆಯು ಭಾರತದ ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿದೆ. ಅವರ ದಣಿವ–ರಿಯದ ಪ್ರಯತ್ನಗಳು, ಸಾಮಾನ್ಯವಾಗಿ ಅತ್ಯಂತ ಸವಾಲಿನ ಸಂದರ್ಭಗಳಲ್ಲಿ, ಅಸಂಖ್ಯಾತ ಜನರ ವಿಶ್ವಾಸ ಮತ್ತು ಕೃತಜ್ಞತೆಯನ್ನು ಗಳಿಸಿವೆ ಎಂದು ಮೋದಿ ಎಕ್?ಸ ಮಾಡಿದ್ದಾರೆ. ಕಳೆದ ದಶಕದಲ್ಲಿ, ಭಾರತವು ಆರೋಗ್ಯ ರಕ್ಷಣಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಎಂದು ಪ್ರಧಾನಿ ಹೇಳಿದರು.ವೈದ್ಯಕೀಯ ಕಾಲೇಜುಗಳ ಸಂಖ್ಯೆ ದ್ವಿಗುಣಗೊಂಡಿದೆ, ಆದರೆ ಪದವಿಪೂರ್ವ ಮತ್ತು ಸ್ನಾತಕೋತ್ತರ ವೈದ್ಯಕೀಯ ಸೀಟುಗಳು ಗಣನೀಯವಾಗಿ ವಿಸ್ತರಿಸಿವೆ ಎಂದು ಅವರು ಹೇಳಿದರು.

ಈ ಅಭೂತಪೂರ್ವ ಬೆಳವಣಿಗೆಯು ಮಹತ್ವಾಕಾಂಕ್ಷಿ ವೈದ್ಯರಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುತ್ತಿದೆ, ಬಲವಾದ ಆರೋಗ್ಯ ರಕ್ಷಣಾ ಕಾರ್ಯಪಡೆಯನ್ನು ನಿರ್ಮಿಸುತ್ತಿದೆ ಮತ್ತು ಗುಣಮಟ್ಟದ ವೈದ್ಯಕೀಯ ಆರೈಕೆ ದೇಶದ ಪ್ರತಿಯೊಂದು ಮೂಲೆಯನ್ನು ತಲುಪುವುದನ್ನು ಖಚಿತಪಡಿಸುತ್ತಿದೆ ಎಂದು ಮೋದಿ ಹೇಳಿದರು. ಸಿಎ ಭ್ರಾತೃತ್ವಕ್ಕೆ ಶುಭಾಶಯಗಳನ್ನು ತಿಳಿಸಿದ ಮೋದಿ, ಅವರು ಭಾರತದ ಆರ್ಥಿಕ ಪ್ರಯಾಣದಲ್ಲಿ ದೀರ್ಘಕಾಲದಿಂದ ವಿಶ್ವಾಸಾರ್ಹ ಪಾಲುದಾರರಾಗಿದ್ದಾರೆ ಎಂದು ಹೇಳಿದರು. ಪಾರದರ್ಶಕತೆ ಮತ್ತು ವೃತ್ತಿಪರ ಶ್ರೇಷ್ಠತೆಗೆ ತಮ್ಮ ಬದ್ಧತೆಯ ಮೂಲಕ, ಸಿಎಗಳು ದೇಶದ ಹಣಕಾಸು ವ್ಯವಸ್ಥೆಗಳನ್ನು ಬಲಪಡಿಸುತ್ತವೆ, ವ್ಯವಹಾರಗಳನ್ನು ಬೆಂಬಲಿಸುತ್ತವೆ, ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುತ್ತವೆ ಮತ್ತು ಹೂಡಿಕೆದಾರರಲ್ಲಿ ವಿಶ್ವಾಸವನ್ನು ಪ್ರೇರೇಪಿಸುತ್ತವೆ ಎಂದು ಅವರು ಹೇಳಿದರು.

## ಮಸ್ಕಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಆರ್.ಸಿದ್ದನಗೌಡರನ್ನೇ ಮುಂದುವರಿಸಿ :ಬಸವರಾಜ ರಂಗಾಪುರ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮಸ್ಕಿ ನಗರ ಯೋಜನಾ ಪ್ರಾಧಿಕಾರಕ್ಕೆ ಆರ್.ಸಿದ್ದನಗೌಡ ತುರವಿಹಾಳ ನೀಡಿದ ರಾಜಿನಾಮೆಯನ್ನು ವಾಪಸ್ಸು ಪಡೆದು ಅವರೇ ಅಧ್ಯಕ್ಷರಾಗಿ ಮುಂದುವರೆಯಬೇಕೆಂದು ಬಸವರಾಜ ನಾಯಕ ರಂಗಾಪೂರು ಒತ್ತಾಯಿಸಿದ್ದಾರೆ. ಬುಧವಾರ ಅವರು ಪತ್ರಿಕಾ ಹೇಳಿಕೆ ನೀಡಿ ಮಸ್ಕಿ ಪಟ್ಟಣದ ಅಭಿವೃದ್ಧಿಗಾಗಿ ಪ್ರಾಧಿಕಾರ ನೂತನವಾಗಿ ರಚನೆಯಾದ ನಂತರ ಮಸ್ಕಿ ಪಟ್ಟಣ ಅಭಿವೃದ್ಧಿ ವಿಚಾರವಾಗಿ ಸಾರ್ವಜನಿಕರಲ್ಲಿ ಹತ್ತಾರು ನೀರಿಕ್ಷೆಗಳನ್ನು ಇಟ್ಟುಕೊಂಡಿದ್ದರು.



ಆದರೆ ಅವರು ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿದ್ದರಿಂದ ಪಟ್ಟಣದ ಅಭಿವೃದ್ಧಿ ವಿಷಯದಲ್ಲಿ ಸಾರ್ವಜನಿಕರಲ್ಲಿ ನಿರಾಶೆ ಉಂಟಾಗಿದೆ. ಆದ್ದರಿಂದ ರಾಜಿನಾಮೆಯನ್ನು ಕೂಡಲೇ ವಾಪಸ್ಸು ಪಡೆದುಕೊಂಡು ಪ್ರಾಧಿಕಾರದ ಅಧ್ಯಕ್ಷರಾಗಿ ಮುಂದುವರೆಯುವುದ–ರಿಂದ ಸಾರ್ವಜನಿಕರ ಅಭಿವೃದ್ಧಿ ಆಶೆಗಳಿಗೆ ಮತ್ತೇ ಚಿಗುರೊಡೆದಂತಾಗುತ್ತದೆ. ಜತೆಗೆ ಮುಂಬರು ಗ್ರಾ.ಪಂ, ತಾ.ಪಂ ಹಾಗೂ ಜಿ.ಪಂ ಚುನಾವಣೆಗಳ ದೃಷ್ಠಿಕೋನದಿಂದ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಆರ್.ಸಿದ್ದಗೌಡ ತುರವಿಹಾಳ ಅವರನ್ನು ಮುಂದುವರೆಸಬೇಕೆಂದು ಶಾಸಕರಲ್ಲಿ ಮತ್ತು ಪಕ್ಷದ ವರಿಷ್ಠರಿಗೆ ಪತ್ರಿಕಾ ಹೇಳಿಕೆ ಮೂಲಕ ಒತ್ತಾಯಿಸಲಾಗುತ್ತದೆ ಎಂದು ಬಸವರಾಜ ನಾಯಕ ರಂಗಾಪೂರು ಮತ್ತು ಆರಿಸಿದ್ದನಗೌಡ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಒತ್ತಾಯಿಸಿದರು.

# ಏಕ ಶಿಕ್ಷಾ ತರಗತಿ ಶಾಲೆ ಸದುಪಯೋಗ ಮಾಡಿಕೊಳ್ಳಿ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಶಿಕ್ಷಣ ರಂಗದಲ್ಲಿ ಹೊಸ ಕ್ರಾಂತಿಯ ರೂಪದಲ್ಲಿ ಹಲವಾರು ಯೋಜನೆಗಳನ್ನು ಶಿಕ್ಷಣ ಇಲಾಖೆ ಅನುಷ್ಠಾನ ಮಾಡುತ್ತಿದ್ದು ಎಲ್ಕೆಜಿಯಿಂದ 5 ನೆಯ ತರಗತಿವರೆಗೆ ಏಕಶಿಕ್ಷಾ ತರಗತಿ ಶಾಲೆಗಳನ್ನು ಜಾರಿ ಮಾಡಿದೆ. ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಹೇಳಿದರು**

ಅವರು ತಾಲ್ಲೂಕಿನ ಬಿಳೆಭಾವಿ ಗ್ರಾಮದಲ್ಲಿ ಆಂಗ್ಲಮಾಧ್ಯಮ ಕಿರಿಯ ಪ್ರಾಥ–'ಮಿಕಶಾಲೆ ಉದ್ಘಾಟಿಸಿ ಬುಧವಾರ ಮಾತನಾಡಿದರು. ನಲಿಕಲಿ ಬದಲಾಗಿ ಸರ್ಕಾರಿ ಶಾಲೆಗಳಲ್ಲಿ ಪ್ರಸಕ್ತ ವರ್ಷದಿಂದ ಆಂಗ್ಲ ಮಾಧ್ಯಮ ಪ್ರಾರಂಭಿಸಲಾಗಿದ್ದು ದ್ವಿಭಾಷಾ ಬೋಧನೆಗೆ ಅಗತ್ಯದ ತರಬೇತಿಯನ್ನು ಶಿಕ್ಷಕರುಗಳಿಗೆ ನೀಡಲಾಗಿದೆ. ಸಾಹಿತ್ಯ ಒದಗಿಸಲಾಗಿದೆ ಸಾಮಾಜಿಕ ನ್ಯಾಯ ನೀಡುವ ಸರ್ಕಾರಿ ಶಾಲೆಗಳಿಗೆ ಪಾಲಕರು ತಮ್ಮ ಮಕ್ಕಳನ್ನು ಸೇರಿಸುವಂತೆ ಮನವಿ ಮಾಡಿದರು. ಶಿಕ್ಷಣ ಸಂಯೋಜಕ ಎಸ್.ಎಸ್.ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಅಧ್ಯಕ್ಷತೆಯನ್ನು ಮುಖ್ಯ ಶಿಕ್ಷಕಿ ಲಕ್ಷ್ಮೀ ವಿಜಾಪುರ ವಹಿಸಿದ್ದರು. ಸಿ.ಆರ್.ಪಿ. ಎಸ್.ಎಂ.ಪಾಲಕಿ, ಶಿಕ್ಷಕ ಬಿ.ಜಿ.ಫತ್ತೆಪುರ ಇತರರಿದ್ದರು. ಶಿಕ್ಷಕ ರಾಘವೇಂದ್ರ ಬಾಕಲಿ ನಿರ್ವಹಿಸಿದರು. ಎಲ್.ಕೆ.ಜಿಗೆ ಪ್ರವೇಶ ಪಡೆದ 18 ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಕರುಗಳಿಂದ ಸಮವಸ್ತ್ರವನ್ನು ಉಚಿತವಾಗಿ ನೀಡಲಾಯಿತು. ಸಿ.ಆರ್.ಪಿ.ಬಾಲಾಜಿ ವಿಜಾಪುರ ಅವರು ಶಾಲಾಬ್ಯಾಗ ಉಚಿತವಾಗಿ ನೀಡುವ ಘೋಷಣೆ ಮಾಡಿದರು. ತಾಳಿಕೋಟೆ ತಾಲ್ಲೂಕಿನ ಬಿಳೆಭಾವಿ ಗ್ರಾಮದಲ್ಲಿ ಆಂಗ್ಲಮಾಧ್ಯಮ ಕಿರಿಯ ಪ್ರಾಥಮಿಕಶಾಲೆಯನ್ನು ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಬುಧವಾರ ಉದ್ಘಾಟಿಸಿದರು.

## ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಜನ್ಮದಿನದಂದು ನಿಂಗಪ್ಪ ವಿ. ಜಿಗೇರಿ ಅವರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್



**ಕುಷ್ಟಗಿ: ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಜನ್ಮದಿನದ ಅಂಗವಾಗಿ ಮಾಜಿ ಸೈನಿಕರು ಹಾಗೂ ವಣಗೇರಿ ಟೋಲ್ ಸಿಬ್ಬಂದಿಗಳು ಕೃಷಿ ಕ್ಷೇತ್ರದಲ್ಲಿ ಸಾಧನೆಗೈದು ನಾಡಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ನಿಂಗಪ್ಪ ವಿ. ಜಿಗೇರಿ ಅವರನ್ನು ಸನ್ಮಾನಿಸಿ ಗೌರವಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸೈನಿಕ ಶಿವಾಜಿ ಹಡಪದ, "ಸಾಲುಮರದ ತಿಮ್ಮಕ್ಕ ಅವರು ಸಾವಿರಾರು ಮರಗಳನ್ನು ನೆಟ್ಟು ಅವುಗಳನ್ನು ತಮ್ಮ ಮಕ್ಕಳಂತೆ ಆರೈಕೆ ಮಾಡಿ ವೃಕ್ಷಮಾತೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಆದರ್ಶವನ್ನು ಪ್ರತಿಯೊಬ್ಬರೂ ಅನುಸರಿಸಿ ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕು.

ಪ್ರತಿಯೊಬ್ಬರೂ ಕನಿಷ್ಠ ಒಂದು ಮರವನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಉಳಿಸುವ ಕಾರ್ಯದಲ್ಲಿ ಕೈಜೋಡಿಸಬೇಕು" ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಬಸವರಾಜ ಅಮರಾವತಿ, ಸಿದ್ದರಾಮಯ್ಯ ಮಾಲಿನಮಠ, ವೆಂಕನಗೌಡ ಬಯ್ಯಾಪುರ, ಮಾಂತಗೌಡ ಮಾಲಿ ಪಾಟೀಲ್, ಕಿರಣ್ ಕುಮಾರ್ ಕಟ್ಟಿಮನಿ, ನಾಗರಾಜ್ ಮಸ್ಕಿ, ವಿಜಯ್ ಸಜ್ಜನ್ ಸೇ–ರಿದಂತೆ ಹಲವರು ಉಪಸ್ಥಿತರಿದ್ದರು.

## SIR ಅಭಿಯಾನ: ಮನೆ–ಮನೆಗೆ ಬರುವ ಅಧಿಕಾರಿಗಳಿಗೆ ಸಾರ್ವಜನಿಕರು ಸಹಕರಿಸಿ ಮುಖ್ಯಾಧಿಕಾರಿ ಕೆ. ಹಂಪಯ್ಯ ಮನವಿ

ನೈಜ್ಯ ದೆಸೆ ನ್ಯೂಸ್



**ದೇವದುರ್ಗ: ಕೇಂದ್ರ ಚುನಾವಣಾ ಆಯೋಗದ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (SIR) ಅಭಿಯಾನದ ಅಂಗವಾಗಿ ದೇವದುರ್ಗ ಪುರಸಭೆ ವ್ಯಾಪ್ತಿಯ ಎಲ್ಲಾ 31 ಮತಗಟ್ಟೆಗಳ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದಾರೆ.**

ಜೂನ್ 30ರಿಂದ ಜುಲೈ 29, 2026ರವರೆಗೆ ನಡೆಯುವ ಈ ಅಭಿಯಾನದಲ್ಲಿ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಲಿದ್ದು, ಸಾರ್ವಜನಿಕರು ಅಗತ್ಯ ದಾಖಲೆಗಳು ಹಾಗೂ ಎರಡೂ ಕಿವಿಗಳು ಸ್ಪಷ್ಟವಾಗಿ ಕಾಣುವ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರವನ್ನು ನೀಡಿ ಸಹಕರಿಸುವಂತೆ ಪುರಸಭೆಯ ಮುಖ್ಯಾಧಿಕಾರಿ ಕೆ. ಹಂಪಯ್ಯ ಮನವಿ ಮಾಡಿದ್ದಾರೆ.

SIR ಕುರಿತು ಯಾವುದೇ ಗೊಂದಲಕ್ಕೆ ಒಳಗಾಗದೆ, ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು ಹಾಗೂ ಅನರ್ಹರ ಹೆಸರುಗಳು ಪಟ್ಟಿಯಲ್ಲಿ ಇರಬಾರದು ಎಂಬುದೇ ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದ್ದಾರೆ. ಆದ್ದರಿಂದ ತಾಲೂಕಿನ ಎಲ್ಲಾ ಸಾರ್ವಜನಿಕರು ಮನೆ–ಮನೆಗೆ ಬರುವ ಮತಗಟ್ಟೆ ಅಧಿಕಾ–ರಿಗಳಿಗೆ ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ನೀಡಿ ಸಹಕರಿಸುವಂತೆ ಮುಖ್ಯಾಧಿಕಾರಿ ಕೆ. ಹಂಪಯ್ಯ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.
ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

## ಬಳಗಾನೂರು ಪಟ್ಟಣ ಪಂಚಾಯತ್ ಸಭೆಯಲ್ಲಿ ಹೈವೋಲ್ಟೇಜ್ ಚರ್ಚೆ: ಅಧಿಕಾರಿಗಳಿಗೆ ಸದಸ್ಯರ ಕ್ಲಾಸ್, ಬಾಕಿ ವೇತನಕ್ಕೆ ಪೌರ ಕಾರ್ಮಿಕರ ಆಕ್ರೋಶ!

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಬಳಗಾನೂರು ಪಟ್ಟಣ ಪಂಚಾಯತ್ ಕಾರ್ಯಾಲಯದ ಸಭಾಂಗಣದಲ್ಲಿ ಬುಧವಾರ ಬೆಳಿಗ್ಗೆ ನಡೆದ ತುರ್ತು ಸಾಮಾನ್ಯ ಸಭೆ ಸದಸ್ಯರ ತೀಕ್ಷ್ಣ ಪ್ರಶ್ನೆಗಳು, ಅಧಿಕಾರಿಗಳ ವಿರುದ್ಧದ ಅಸಮಾಧಾನ ಹಾಗೂ ಪೌರ ಕಾರ್ಮಿಕರ ವೇತನದ ಬೇಡಿಕೆಯಿಂದ ಹೈವೋಲ್ಟೇಜ್ ಚರ್ಚೆಗೆ ಸಾಕ್ಷಿಯಾಯಿತು.ಸಭೆಯ ಆರಂಭದಲ್ಲಿ 31–3–2026ರಂದು ನಡೆದ ತುರ್ತು ಸಭೆಯ ನಡುವಳಿಗಳನ್ನು ಓದಿ ಸದಸ್ಯರಿಂದ ದೃಢೀಕ–ರಿಸಲಾಯಿತು. ಬಳಿಕ 2026–27ನೇ ಸಾಲಿನ ಆಯ–ವ್ಯಯದಲ್ಲಿ ಮಂಜೂರಾಗಿರುವ 1.80 ಕೋಟಿ ಮೊತ್ತಕ್ಕೆ 16ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆ ರೂಪಿಸುವ ಕುರಿತು ವಿಸ್ತೃತ ಚರ್ಚೆ ನಡೆಯಿತು.**

ಇದರೊಂದಿಗೆ ಬೀದಿಬದಿ ವ್ಯಾಪಾರಸ್ಥ–ರಿಂದ ದಿನ ವಸೂಲಿಯ ದರ ನಿಗದಿ, ಎಸ್‌ಡಬ್ಲ್ಯು–ಎಂ (SWM) ಸೆಸ್ ವಸೂಲಿ, ಪೌರ ಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕ್‌ಅಪ್ ನಡೆಸುವುದು, ಮೊದಲನೇ ವಾರ್ಡಿನ ಪೂಜಾರಿ ಓಣಿಯಲ್ಲಿ ಚರಂಡಿ ನಿರ್ಮಾಣ, ಸರ್ವೆ ನಂಬರ್.295 ಬಾರ್ 1 ರ 12 ಎಕರೆ 4 ಗುಂಟೆ ಜಾಗದಲ್ಲಿ 3 ಎಕರೆ 20 ಗುಂಟೆ ನಿವೇಶನಕ್ಕೆ ಎರಡನೇ ಹಂತದಲ್ಲಿ ಶೇಖಡಾ 60 ರಷ್ಟು ನಿವೇಶನ ಬಿಡುಗಡೆ ಹಾಗೂ ಅಭಿವೃದ್ಧಿಯಾಗದೆ ಉಳಿದಿರುವ ಲೇಔಟ್‌ಗಳ ಕುರಿತು ಸದಸ್ಯರು ಸುದೀರ್ಘ ಚರ್ಚೆ ನಡೆಸಿದರು.

ಚರ್ಚೆಯ ವೇಳೆ ಅಧ್ಯಕ್ಷ ಶಿವಕುಮಾರ ನಾಯಕ ಹಾಗೂ ಉಪಾಧ್ಯಕ್ಷ ಹುಸೇನಭಾಷಾ ಬೂದಗುಂಪಾ ಅವರು, ಕಳೆದ ಸಭೆಯಲ್ಲಿ ಸದಸ್ಯರು ನೀಡಿದ್ದ ಸೂಚನೆಗಳು ಇನ್ನೂ ಜಾರಿಯಾಗದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. "ಸದಸ್ಯರ ಮಾತಿಗೆ ಬೆಲೆ ಇಲ್ಲವೇ? ಮುಂದಿನ ಸಭೆಯಲ್ಲೂ ಇದೇ ನಿರ್ಲಕ್ಷ್ಯ ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು" ಎಂದು ಎಚ್ಚರಿಕೆ ನೀಡಿದರು. ನೀರು ಸರಬರಾಜು ಸಿಬ್ಬಂದಿ, ಕರಣಿಕರು ಹಾಗೂ ಕಂದಾಯ ನಿರೀಕ್ಷಕರ ಬೇಜವಾಬ್ದಾ–ರಿತನವನ್ನು ತರಾಟೆಗೆ ತೆಗೆದುಕೊಂಡು ಆಡಳಿತ



ವ್ಯವಸ್ಥೆ ಚುರುಕುಗೊಳಿಸುವಂತೆ ಸೂಚಿಸಿದರು. ಸದಸ್ಯರಾದ ಬಸವರಾಜಸ್ವಾಮಿ ಗುಣಾರಿ,ಮಂಜುನಾಥ ಸ್ವಾಮಿ ಹಾಗೂ ಹನುಮೇಶ ಹೂಗಾರ್ ಅವರು ಸಹ ತಾವು ಸೂಚಿಸಿದ ಕೆಲಸಗಳು ಆಗದಿರುವುದಕ್ಕೆ ಬೇಸರ ವ್ಯಕ್ತಪಡಿಸಿ, ಮುಖ್ಯಾಧಿಕಾರಿ ಮತ್ತು ಸಿಬ್ಬಂದಿಯನ್ನು ಪ್ರಶ್ನಿಸಿದರು.

ನಾಮನಿರ್ದೇಶಿತ ಸದಸ್ಯ ಶಿವರೆಡ್ಡಿ ಅವರು ಫಿಲ್ಟರ್ ವಾಟರ್ ಕೇಂದ್ರಗಳ ಅವ್ಯವಸ್ಥೆ, ಹೈಮಾಸ್ಟ್ ದೀಪಗಳ ಅಳವಡಿಕೆ ಹಾಗೂ ಸಿಎ ಸೈಟ್‌ಗಳ ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಇನ್ನುಳಿದ ನಾಮನಿರ್ದೇಶಿತ ಸದಸ್ಯರಾದ ಹುಸೇನಪ್ಪ ಹಾಗೂ ಮಲ್ಲರಡ್ಡಿ ಗೌಡ ಅವರು ಮಂದಗತಿಯ ಆಡಳಿತ ಕಾರ್ಯವೈಖರಿಯನ್ನು ಖಂಡಿಸಿ ತ್ವರಿತ ಕ್ರಮಕ್ಕೆ ಆಗ್ರಹಿಸಿದರು. ಮಹಿಳಾ ಸದಸ್ಯೆಯರೂ ತಮ್ಮ ವಾರ್ಡ್‌ಗಳ ಮೂಲಸೌಕರ್ಯ ಸಮಸ್ಯೆಗಳು ಮತ್ತು ಅಭಿವೃದ್ಧಿ ಕಾಮಗಾ–ರಿಗಳ ಕುರಿತು ಅಧಿಕಾರಿಗಳಿಂದ ಸ್ಪಷ್ಟನೆ ಕೇಳಿದರು. ಸಭೆ ಮುಕ್ತಾಯವಾದ ಬಳಿಕ ಪೌರ ಕಾರ್ಮಿಕರು ನಾಲ್ಕೈದು ತಿಂಗಳಿನಿಂದ ವೇತನ ಬಾಕಿಯಿರುವುದನ್ನು ಪ್ರಶ್ನಿಸಿ, "ಸಂಬಳವಿಲ್ಲದೆ ಜೀವನ ನಡೆಸುವುದು ಕಷ್ಟವಾಗಿದೆ. ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ಕೂಡಲೇ ಬಾಕಿ ವೇತನ ಬಿಡುಗಡೆ ಮಾಡಬೇಕು" ಎಂದು ಏರುಧ್ವನಿಯಲ್ಲಿ ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಸುಮಾರು 18 ವರ್ಷಗಳ ಕಾಲ ದಿನಗೂಲಿ ಲೈನ್‌ಮನ್ ಆಗಿ ಸೇವೆ ಸಲ್ಲಿಸಿ ವಯೋನಿವೃತ್ತರಾದ ಕಾಸಿಂ ಸಾಬ್ (ತಂದೆ: ಶರೀಫ್ ಸಾಬ್) ಅವರನ್ನು ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಸಿಬ್ಬಂದಿ ಹಾಗೂ ಪೌರ ಕಾರ್ಮಿಕರು ಆತ್ಮೀಯವಾಗಿ ಸನ್ಮಾನಿಸಿ ಗೌರವಪೂರ್ವಕವಾಗಿ ಬೀಳ್ಕೊಟ್ಟರು.
ವರದಿ: ಸುರೇಶ ಬಳಗಾನೂರು

## ಸಾಹಿತ್ಯ ಸಿಂಚನ

ನಗು

ನಗು ಒಂದು ಅಮೂಲ್ಯ ಧನ,
ಮನದ ನೋವಿಗೆ ಸಿಹಿ ಔಷಧಿ ತನ.
ಒಂದು ನಗು ಸಾಕು ಹೃದಯ ಗೆಲ್ಲಲು,
ಕತ್ತಲ ಮನಕೆ ಬೆಳಕು ಚೆಲ್ಲಲು.

ನಗುವ ಮುಖವೇ ಸುಂದರ ರೂಪ,
ಅದರೊಳಗಿದೆ ಪ್ರೀತಿಯ ಸ್ವರೂಪ.
ಕಷ್ಟ ಬಂದರೂ ನಗು ಬಿಡಬೇಡ,
ಜೀವನದ ಹಾದಿಯಲ್ಲಿ ಧೈರ್ಯ ಕಳೆದುಕೊಳ್ಳಬೇಡ.

ನಗಿದರೆ ಸ್ನೇಹ ಬೆಳೆಸುವ ಸೇತು,
ದುಃಖ ಕರಗಿಸುವ ಮಧುರ ಗೀತು.
ನಿನ್ನ ನಗು ಸದಾ ಇರಲಿ ಹಸನಾಗಿ,
ಜೀವನ ಸಾಗಲಿ ಸಂತೋಷವಾಗಿ

**ಅಮರೇಶ್**

# ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

ಬಳ್ಳಾರಿ / ಕಂಪ್ಲಿ: ಪಟ್ಟಣದ ಗೊಗ್ಗ ಚನ್ನಬಸಯ್ಯ ಐಟಿಐ ಕಾಲೇಜ್ ಮತ್ತು ಶಾರದಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಧರ್ಮಸ್ಥಳ ಯೋಜನೆಯ ತಾಲೂಕು ಯೋಜನೆವತಿಯಿಂದ "ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ" ಕಾರ್ಯಕ್ರಮ ನಡೆಯಿತು. ಅಂತರಾಷ್ಟ್ರೀಯ ಮಾದಕ ವಸ್ತು ವಿರುದ್ಧ ದಿನಾಚರಣೆ ಕಾರ್ಯಕ್ರಮಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ.ಡಿ.ವೀರೇಂದ್ರ ಹೆಗಡೆ ಅವರಿಂದ ಚಾಲನೆ ದೊರಯಿತು.

ಇಲ್ಲಿನ ಕಾರ್ಯಕ್ರಮವನ್ನು ವೀರಶೈವ ಲಿಂಗಾಯತ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎಂ.ನಾಗರಾಜ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ



ಯೋಜನೆ ಪ್ರತಿವರ್ಷ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಪಟ್ಟಣಗಳಲ್ಲಿ ಹಲವು ಕಾರ್ಯಕ್ರಮಗಳಾದ ತಂಬಾಕು ವಿರೋಧಿ ದಿನಾಚರಣೆ, ಮಾದಕ ವಸ್ತು ವಿರೋಧಿ ದಿನಾಚರಣೆ, ಮದ್ಯವರ್ಜನ ಶಿಬಿರ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ, ಈ ರೀತಿಯ ವಿಶೇಷ ಕಾರ್ಯಕ್ರಮಗಳನ್ನು ನಡೆಸಿ ಶಾಲಾ ಕಾಲೇಜಿನ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಜರುಗಿತು.

ಏಕ ಕಾಲದಲ್ಲಿ ರಾಜ್ಯದ ಒಂದು ಸಾವಿರ ಶಾಲಾ ಕಾಲೇಜಿನ ಸುಮಾರು 2 ಲಕ್ಷ ಮಕ್ಕಳಲ್ಲಿ ಮಾದಕ ವಸ್ತು ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ವಿಡಿಯೋ ಕಾನ್ಫರೆನ್ಸ್ ಮೂಲಕ ಮಾಹಿತಿ ಮಾರ್ಗದರ್ಶನ ನೀಡಿ ಮಕ್ಕಳಿಗೆ ಮುಂದಿನ ಭವಿಷ್ಯದ ಬಗ್ಗೆ ಮನದಟ್ಟು ಮಾಡಿದರು. ಮುಖಂಡರಾದ ಡಿ.ವೀರಪ್ಪ, ವಾಗೀಶ್, ಬಸವರಾಜ ಡಾ.ವೆಂಕಟೇಶ್ ಬರಮಕ್ಕನವರ್, ರಾಮಾಂಜನೇಯಲು, ಉಮಾಮಹೇಶ್ವರಿ, ತಾಲೂಕು ಯೋಜನಾಧಿಕಾರಿ ರಾಘವೇಂದ್ರ, ಕೃಷಿ ಅಧಿಕಾರಿ ಸಂಜುಕುಮಾರ್, ವಲಯದ ಮೇಲ್ವಿಚಾರಕ ಮಂಜುನಾಥ್, ಕಚೇರಿ ಪ್ರಬಂಧಕ ರಾಜೇಶ್, ಸೇವಾದಾರರಾದ ದರ್ಶನ್, ಮಲ್ಲಿಕಾರ್ಜುನ ಹಾಗೂ ಶಾಲೆಯ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಪಾಲ್ಗೊಂಡಿದ್ದರು.
ವರದಿ : ಜಿಲಾನಸಾಬ್ ಬಡಿಗೇರ್

## ಸಂಗಮೇಶ್ವರ್ ಪ್ರೌಢಶಾಲೆ: ಶಾಲಾ ಸಂಸತ್ ಚುನಾವಣೆ

**ನೈಜ್ಯ ದೆಸೆ ನ್ಯೂಸ್**

ತಾಳಿಕೋಟಿ: ಪಟ್ಟಣದ ಶ್ರೀ ಎಸ್.ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಪ್ರೌಢಶಾಲೆಯಲ್ಲಿ ಮಂಗಳವಾರ 2026-2027ನೇ ಶೈಕ್ಷಣಿಕ ಸಾಲಿನ ಶಾಲಾ ಸಂಸತ್ತಿನ ಚುನಾವಣೆ ನಡೆಸಲಾಯಿತು. ವಿದ್ಯಾರ್ಥಿಗಳಲ್ಲಿ ಮತದಾನ ಜಾಗೃತಿ ಅರಿವು ಮೂಡಿಸುವ ಕುರಿತು ತಂತ್ರಜ್ಞಾನ ಬಳಸಿ ಮತದಾನ ನಡೆಸಲಾಯಿತು.



ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಮತದಾನ ಹೇಗೆ ಮಾಡುವುದು ಎಂದು ಪ್ರೌಢಶಾಲೆಯ ಶಿಕ್ಷಕ ಎಸ್.ವಿ. ಜಾಮಗೊಂಡಿ ವಿವರಿಸಿದರು. ಮತಗಟ್ಟೆ ಅಧಿಕಾರಿಯಾಗಿ ಪ್ರೌಢಶಾಲೆಯ ಮುಖ್ಯಸ್ಥ ಅಶೋಕ ಕಟ್ಟಿ ಕಾರ್ಯ ನಿರ್ವಹಿಸಿದರು. ಮತದಾನ ಮತಗಟ್ಟೆ ಸಹಾಯಕರಾಗಿ ಸಿಬ್ಬಂದಿಗಳಾದ ಎಸ್.ಸಿ.ಗುಡಗುಂಟಿ, ಬಿ.ಆಯ್. ಹಿರೇಹೊಳಿ,ಎಮ್.ಎಸ್. ರಾಯಗೊಂಡ, ಯು.ಎಚ್.ಗಟನೂರ, ಸಿದ್ದನಗೌಡ ಮುದನೂರ, ಸುನೀಲ ಮತ್ತಿಗಟ್ಟಿ, ರೇಣುಕಾ ಬಿರಾದಾರ ಕಾರ್ಯ ನಿರ್ವಹಿಸಿದರು.ಮತದಾನ ಕಾರ್ಯ ಮುಗಿದ ಮೇಲೆ ಮತ ಎಣಿಕೆ ಕಾರ್ಯ ನಡೆಯಿತು ಮತ ಎಣಿಕೆ ಕಾರ್ಯ ಶಿಕ್ಷಕ ಬಿ.ಆಯ್. ಹಿರೇಹೊಳಿ ನಡೆಸಿದರು.8ನೇ ತರಗತಿಯ ವರ್ಗ ಪ್ರತಿನಿಧಿಗಳಾಗಿ ಗಣೇಶ ನೆ.ರಾಠೋಡ,ಲಕ್ಷ್ಮಿ ಚೌವಾಣ, 9ನೇ ತರಗತಿ ವರ್ಗ ಪ್ರತಿನಿಧಿಯಾಗಿ ಅಬೂಬಕರ ಶೇಖ, ಸಪ್ನಾ ಡಿ.ಜಾಧವ,10ನೇ ತರಗತಿ ವರ್ಗ ಪ್ರತಿನಿಧಿಯಾಗಿ ಪುಟ್ಟರಾಜ ರಾಠೋಡ, ಚಂದ್ರಕಲಾ ದ್ಯಾಸರ, ಜಿ.ಎಸ್ ಗಳಾಗಿ ರಾಹುಲ. ರಾಠೋಡ, ಮತ್ತು ಲಲಿತಾ ಚೌವಾಣ ಆಯ್ಕೆಯಾದರು. ಆಯ್ಕೆಯಾದ ಎಲ್ಲಾ ಪ್ರತಿನಿಧಿಗಳಿಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕರಾದ ಎಚ್.ಎಸ್.ಪಾಟೀಲ ಕಾರ್ಯದರ್ಶಿಗಳಾದ ಸಚಿನ ಎಚ್.ಪಾಟೀಲ ಆಡಳಿತಾಧಿಕಾರಿ ಕಿರಣ ಎಚ್.ಪಾಟೀಲ ಪ್ರೌಢಶಾಲೆಯ ಮುಖ್ಯಸ್ಥ ಹಾಗೂ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದರು.

# ಪಟ್ಟಣದಲ್ಲಿ ವಿವಿಧ ಅಂಗಡಿಗಳ ಮೇಲೆ ಟಾಸ್ಕ್ ಫೋರ್ಸ್ ತಂಡ ದಾಳಿ : ಮಕ್ಕಳ ರಕ್ಷಣೆ



**ನೈಜ್ಯ ದೆಸೆ ನ್ಯೂಸ್**

ಬಳ್ಳಾರಿ / ಕಂಪ್ಲಿ: ಪಟ್ಟಣದ ವಿವಿಧ ಉದ್ದಿಮೆ ಹಾಗೂ ಅಂಗಡಿಗಳ ಮೇಲೆ ಮಂಗಳವಾರ ದಾಳಿ ನಡೆಸಿದ ಬಾಲ ಕಾರ್ಮಿಕ ಹಾಗೂ ಟಾಸ್ಕ್ ಫೋರ್ಸ್ ಸಮಿತಿಯ ಅಧಿಕಾ-ರಿಗಳ ತಂಡ ಬಾಲಕಾರ್ಮಿಕರನ್ನು ರಕ್ಷಿಸಿದರು. ಪಟ್ಟಣ ತಹಾಶೀಲ್ದಾರ್ ಕಛೇರಿಯಲ್ಲಿ ಮಂಗಳವಾರ ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಿದ ಬಳಿಕ ದಾಳಿ ಕೈಗೊಳ್ಳಲಾಗಿದೆ.

ಕಾರ್ಮಿಕ ಇಲಾಖೆಯ ಜಿಲ್ಲಾ ಯೋಜನಾಧಿಕಾರಿ ಡಿ.ಮೌನೇಶ ಮಾತನಾಡಿ, ಬಾಲ ಕಾರ್ಮಿಕರನ್ನು ಅಂಗಡಿ ಮುಂಗಟ್ಟುಗಳಲ್ಲಿ ದುಡಿಯಲಿಕ್ಕೆ ಬಳಸಿಕೊಳ್ಳುವುದು ಕಾನೂನು ಬಾಹಿರ. ಆದ್ದರಿಂದ ಪಟ್ಟಣದ ಕೆಲ ಅಂಗಡಿಗಳಿಗೆ ಭೇಟಿ ನೀಡಿದಾಗ ಮಾತ್ರ ಅಲ್ಲಿರುವ ಬಾಲ ಕಾರ್ಮಿಕರ ಬಗ್ಗೆ ಅತಿ ಹೆಚ್ಚು ಗಮನ ಹರಿಸಲು ಸಾಧ್ಯ. ಈ ನಿಟ್ಟಿನಲ್ಲಿ ಟಾಸ್ಕ್ ಫೋರ್ಸ್ ಸಮಿತಿಯ ತಂಡದಿಂದ ದಾಳಿ ಅನಿವಾರ್ಯವಾಗಿದೆ. ಇದ-ರಿಂದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ. ಇಲ್ಲಿನ ಅಂಗಡಿಗಳನ್ನು ಸಿಕ್ಕಂತಹ ಬಾಲ ಕಾರ್ಮಿಕ ಮಕ್ಕಳನ್ನು ಅವರ ಶಾಲೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಶಾಲೆಗೆ ತೆರಳುವಂತೆ ಖಡನ್ ಸೂಚನೆ ನೀಡಲಾಗಿದೆ ಎಂದರು.

ನಂತರ ಪಟ್ಟಣದಲ್ಲಿ 20ಕ್ಕೂ ಹೆಚ್ಚು ಅಂಗಡಿಗಳಿಗೆ ಮತ್ತು ವಾರದ ಸಂತೆ ಮಾರುಕಟ್ಟೆಗೆ ಭೇಟಿ ನೀಡಿ, ಬಾಲ ಕಾರ್ಮಿಕ ಪದ್ಧತಿ ತಡೆಗಟ್ಟುವ ನಿಟ್ಟಿನಲ್ಲಿ ಕರಪತ್ರಗಳನ್ನು ನೀಡುವ ಮೂಲಕ ಸಾರ್ವಜನಿಕ ವಲಯದಲ್ಲಿ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಮಿಕ ನಿರೀಕ್ಷಕ ಶಿವಶಂಕರ ತಳವಾರ್, ಎಎಸ್‌ಐ ಮಹಾಂತೇಶ, ಪಿಸಿ ರಾಮಾಂಜಿನಿ, ಡಿಇಒ ವಿಘ್ನೇಶ, ಪ್ರಭಾರಿ ಕೃಷಿ ಅಧಿಕಾರಿ ಜ್ಯೋತಿ, ಅಗ್ರಿಕಲ್ಚರಲ್ ಅಧಿಕಾರಿ ನವ್ಯ ಪ್ರಸಾಂತ್, ಮಕ್ಕಳ ಸಹಾಯಕವಾಣಿ ಕೇಂದ್ರದ ಆಪ್ತ ಸಮಾಲೋಚಕಿ ಚಂದ್ರಕಲಾ, ರೀಚ್ ಸಂಸ್ಥೆ ಸಂಯೋಜಕ ಹೆಚ್.ಹನುಮಂತಪ್ಪ, ಸಿಆರ್‌ಪಿ ರೇಣುಕಾರಾಧ್ಯ, ನಿಲಯ ಪಾಲಕರಾದ ಕೆ.ವಿರುಪಾಕ್ಷಪ್ಪ, ಗಾದಿಲಿಂಗಪ್ಪ, ರೀಡ್ಸ್ ಸಂಸ್ಥೆಯ ಮಧನ್ ಸೇರಿದಂತೆ ಇತರರು ಇದ್ದರು.
ವರದಿ : ಜಿಲಾನಸಾಬ್ ಬಡಿಗೇರ್

# ಶಾಸಕ ಗಣೇಶಗೆ ಸಚಿವ ಸ್ಥಾನ ಸಿಗಲೆಂದು ಹಾರೈಯಿಸಿ, ಕಂಪ್ಲಿಯಿಂದ ಹಂಪಿವರೆಗೂ ಹಾಲಿನ ಬಿಂದಿಗೆಯೊಂದಿಗೆ ಪಾದಯಾತ್ರೆ ನಡೆಸಿ ಅಭಿಮಾನಿ ದೊಡ್ಡ ರಾಮಾಲಿಸ್ವಾಮಿ

**ನೈಜ್ಯ ದೆಸೆ ನ್ಯೂಸ್**

ಬಳ್ಳಾರಿ / ಕಂಪ್ಲಿ: ಜನಪ್ರೀಯ ಶಾಸಕ ಜೆ.ಎನ್. ಗಣೇಶ ಇವರಿಗೆ ಸಚಿವ ಸ್ಥಾನ ಸಿಲೆಂದು ಹಾರೈಯಿಸಿ, ಕಂಪ್ಲಿ ತಾಲೂಕಿನ ಸುಗ್ಗೇನಹಳ್ಳಿ ಗ್ರಾಪಂಯ ಹೊನ್ನಳ್ಳಿ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತ ಮತ್ತು ಅಭಿಮಾನಿ ದೊಡ್ಡ ರಾಮಾಲಿಸ್ವಾಮಿ ಇವರು ಕಂಪ್ಲಿ ಪಟ್ಟಣದ ಐತಿಹಾಸಿಕ ಸೋಮಪ್ಪ ದೇವಸ್ಥಾನದಲ್ಲಿ ಬುಧವಾರ ವಿಶೇಷ ಪೂಜೆ ಸಲ್ಲಿಸಿ, ಹಾಲಿನ ಬಿಂದಿಗೆಯೊಂದಿಗೆ ಪಾದಯಾತ್ರೆ ಆರಂಭಿಸಿದರು.

ಕಂಪ್ಲಿಯಿಂದ ಕಾಲ್ನಡಿಗೆ ಮೂಲಕ ಪಾದಯಾತ್ರೆ ಪ್ರಾರಂಭಿಸಿ, ನಂ.10 ಮುದ್ದಾಪುರ ಮಾರ್ಗದೊಂದಿಗೆ ರಾಮಸಾಗರ, ಬುಕ್ಕಸಾಗರ, ವೆಂಕಟಾಪುರ ಕ್ಯಾಂಪ್, ಕಮಲಾಪುರದಿಂದ ಹಂಪಿಯ ವಿರುಪಾಕ್ಷ ದೇವಸ್ಥಾನವರೆಗೂ ಹಾಲಿನ



ಬಿಂದಿಗೆ ಮೂಲಕ ವಿರುಪಾಕ್ಷಪ್ಪ ಸನ್ನಿದಾನಕ್ಕೆ ತೆರಳಿ, ನಂತರ ವಿರುಪಾಕ್ಷಪ್ಪ ದೇವರಿಗೆ ಹಾಲಿನ ಅಭಿಷೇಕದೊಂದಿಗೆ ಮಾನ್ಯ ಗಣೇಶಗೆ ಸಚಿವ ಸ್ಥಾನ ಸಿಗಲೆಂದು ಬೇಡಿಕೊಂಡರು. ತದನಂತರ ಅಭಿಮಾನಿ ದೊಡ್ಡ ರಾಮಾಲಿಸ್ವಾಮಿ ಮಾತನಾಡಿ, ಈ ಮೊದಲ ಮಾನ್ಯ ಜೆ.ಎನ್. ಗಣೇಶ ಅವರು ಶಾಸಕರಾಗಬೇಕೆಂದು ಕಂಪ್ಲಿ ಸೋಮೇಶ್ವರ ದೇವಸ್ಥಾನದಿಂದ ಪಾದಯಾತ್ರೆ ಮೂಲಕ ಕುರುಗೋಡು ದೊಡ್ಡ ಬಸವೇಶ್ವರ ದೇವಸ್ಥಾನವರೆಗೂ ಪಾದಯಾತ್ರೆ ನಡೆಸಲಾಗಿತ್ತು.

ಇದರ ಹಿನ್ನಲೆ ಶಾಸಕ ಗಣೇಶ ಇವರು ಮೊದಲ ಬಾರಿಗೆ ಶಾಸಕರಾಗಿ ಹೊರ ಹೊಮ್ಮಿರುವುದು ಖುಷಿ ತಂದಿದೆ. ಕಳೆದ ಎರಡು ಬಾರಿ ಶಾಸಕರಾಗಿ ಅನೇಕ ಅಭಿವೃದ್ಧಿಯೊಂದಿಗೆ ಜನಪರ ಕೆಲಸ ಮಾಡಿದ್ದಾರೆ. ಆದ್ದರಿಂದ ಇನ್ನಷ್ಟು ಅಭಿವೃದ್ಧಿ ಜೊತೆಗೆ ಜಿಲ್ಲೆ ಮತ್ತು ರಾಜ್ಯದ ಜನರ ಸೇವೆ ಸಲ್ಲಿಸಲು, ಸಚಿವ ಸ್ಥಾನ ಲಭಿಸಬೇಕಾಗಿದೆ. ಆ ಹಿನ್ನಲೆಯಲ್ಲಿ ಶಾಸಕ ಗಣೇಶಗೆ ಸಚಿವ ಸ್ಥಾನ ನೀಡಬೇಕೆಂದು ಕಂಪ್ಲಿಯಿಂದ ಹಂಪಿವರೆಗೆ ಪಾದಯಾತ್ರೆ ಮಾಡಿರುವೆ ಎಂದರು.
ವರದಿ : ಜಿಲಾನಸಾಬ್ ಬಡಿಗೇರ್

# ಶಾಸಕಿ ಕರೆಮ್ಮ ಜಿ.ನಾಯಕ ಮೃತರ ಕುಟಂಬಕ್ಕೆ ಭೇಟಿ ಸಾಂತ್ವನ-ಕ್ಯಾದಿಗ್ಗೇರಾ



**ನೈಜ್ಯ ದೆಸೆ ನ್ಯೂಸ್**

ಅರಕೇರಾ: ದೇವದುರ್ಗ ಪಟ್ಟಣದಲ್ಲಿ ಇತ್ತೀಚಿಗೆ ಸಂಭವಿಸಿದ ದುರದೃಷ್ಟಕರ ಗೋಡೆ ಕುಸಿತದ ಘಟನೆಯಲ್ಲಿ ಮೃತಪಟ್ಟ ನಾಗರಾಜ ಕ್ಯಾದಿಗ್ಗೇರಾ ಯುವಕನ ಕುಟುಂಬಕ್ಕೆ ಶಾಸಕರು ಶ್ರೀಮತಿ ಕರೆಮ್ಮ ಜಿ.ನಾಯಕ ಅವರು ಭೇಟಿ ನೀಡಿ ಸಾಂತ್ವನ ಹೇಳಿ ಮತ್ತು ಶೋಕವನ್ನು ವ್ಯಕ್ತಪಡಿಸಿದರು ಸರಕಾರದ ವತಿಯಿಂದ ಸಿಗಬೇಕಾದ ಪರಿಹಾರವನ್ನು ಕೊಡಿಸುವುದಾಗಿ ಭರವಸೆ ನೀಡಿದರು.

ದುರಂತದ ಹಿನ್ನೆಲೆಯಲ್ಲಿ ಮೃತರ ನಿವಾಸಕ್ಕೆ ಖುದ್ದಾಗಿ ಭೇಟಿ ನೀಡಿದ ಶಾಸಕರು, ಶೋಕತಪ್ತ ಕುಟುಂಬದ ಸದಸ್ಯರ ಕೈಹಿಡಿದು ಸಾಂತ್ವನ ತುಂಬಿದರು. ಮೃತನ ಕುಟುಂಬಕ್ಕೆ ಎಲ್ಲಾ-ರೀತಿಯ ನೆರವು ನೀಡುವುದಾಗಿ ಭರವಸೆ ನೀಡಿದ ಶಾಸಕರು ಈ ದುರಂತ ಘಟನೆಯು ಅತ್ಯಂತ ದುಃಖಕರವಾಗಿದೆ ನಾಗರಾಜ ಕ್ಯಾದಿಗ್ಗೇರಾ ಅವರ ಕುಟುಂಬಕ್ಕೆ ಆದ ನಷ್ಟವನ್ನು ಭರಿಸಲು ಸಾಧ್ಯವಿಲ್ಲ. ನಾವು ಅವರ ದುಃಖದಲ್ಲಿ ಪಾಲ್ಗೋಳುತ್ತೇವೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಕುಟುಂಬಸ್ಥರಿಗೆ ಭರವಸೆ ನೀಡಿದರು. ಶಾಸಕರು ವೈಯಕ್ತಿಕವಾಗಿ ಪರಿಹಾರ ನೀಡಿದರು. ಅಗತ್ಯವಿರುವ ಎಲ್ಲಾ ರೀತಿಯ ಬೆಂಬಲವನ್ನು ನೀಡಲು ಸಿದ್ದರಿದ್ದೇವೆ ಎಂದು ಶಾಸಕ ಕರೆಮ್ಮ ಜಿ.ನಾಯಕ ಹೇಳಿದರು.

ಈ ಭೇಟಿಯ ಸಂದರ್ಭದಲ್ಲಿ ದೇವದುರ್ಗ ತಹಶೀಲ್ದಾರ ನಾಗಮ್ಮ ಕಟ್ಟಿಮನಿ, ಅರಕೇರಾ ತಹಶೀಲ್ದಾರ ಅಮರೇಶ ಬೀರಾದಾರ ಮತ್ತು ಪಕ್ಷದ ಮುಖಂಡರಾದ ಸಿದ್ದಣ್ಣತಾತ ಮುಂಡರಗಿ, ದೇವದುರ್ಗ ತಾಲೂಕು ಅಧ್ಯಕ್ಷರಾದ ಬಸನಗೌಡ ದೇಸಾಯಿವಕೀಲರು, ಅರಕೇರಾ ತಾಲೂಕು ಮಹಾಪ್ರಧಾನ ಕಾರ್ಯದರ್ಶಿಯಾದ ಬಸವರಾಜ ದೊರೆ ಗುತ್ತೇದಾರಮರಕಂದಿನ್ನಿ,ಕಾಯ ರ್ಯಾಧ್ಯಕ್ಷರಾದ ಗುರುನಾಥಗೌಡ ಮಲದಕಲ್,ಯುವ ಅಧ್ಯಕ್ಷರಾದ ರಮೇಶ ರಾಮನಾಳ, ಮಂಜುನಾಥ ಮತ್ತಳ್ಳಿ, ಗೋವಿಂದರಾಜನಾಯಕ ಚಿಕ್ಕಗುಡ್ಡ ಕೊತ್ತದೊಡ್ಡಿ, ತಿಮ್ಮರೆಡ್ಡಿನಾಯಕ ಜಾಗಟಗಲ್ ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರು ಮುಂತಾದವರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಜು.9ಕ್ಕೆ ಬೆಂಗಳೂರು ಚಲೋ : ಆರ್.ಎಸ್.ಬಸವರಾಜ

**ನೈಜ್ಯ ದೆಸೆ ನ್ಯೂಸ್**

ಬಳ್ಳಾರಿ / ಕಂಪ್ಲಿ: ಬೆಲೆ ಏರಿಕೆಗೆ ತಕ್ಕಂತೆ ಹೊಸದಾಗಿ ಜಾರಿಯಾದ ಕನಿಷ್ಠ ವೇತನ ಜಾರಿ ಮಾಡಬೇಕು. ಮತ್ತು ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದಿಂದ ಜು.9ಕ್ಕೆ ಬೆಂಗಳೂ-ರಿನ ಫ್ರೀಡಂ ಪಾರ್ಕ್‌ನಲ್ಲಿ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಆರ್.ಎಸ್.ಬಸವರಾಜ ಹೇಳಿದರು.

ಪಟ್ಟಣದ ಐತಿಹಾಸಿಕ ಸೋಮಪ್ಪ ದೇವಸ್ಥಾನ ಆವರಣದಲ್ಲಿ ಬುಧವಾರ ನಡೆದ ಸಂಘಟನಾ ಸಭೆಯಲ್ಲಿ ಮಾತನಾಡಿ, ಈಗಾಗಲೇ ವೇತನದಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆ ಮಾಡಿರುವುದು ಸ್ವಾಗತಾರ್ಹವಾಗಿದೆ. ಆದರೆ, ಸರ್ಕಾರ



ಹೊಸದಾಗಿ ಜಾರಿಯಾಗಿರುವ ಕನಿಷ್ಠ ವೇತನ ಜಾರಿ ಮಾಡಬೇಕಾಗಿದೆ. ಅನುಭವದ ಆಧಾರದ ಮೇಲೆ ಹೆಚ್ಚುವರಿ ವೇತನ ನೀಡಬೇಕು. ಸತತ ಮೂರು ವರ್ಷದಿಂದ ಹೋರಾಟ ಮಾಡುತ್ತಿದ್ದೇವೆ. ಹಲವು ವರ್ಷಗಳಿಂಥ ಕರವಸೂಲಿಗಾರರು, ಗುಮಾಸ್ತರು, ಕ್ಲರ್ಕ್, ಡಿ.ಇ.ಒ, ನೀರಗಂಟಿ, ವಾಟ-ರ್‌ಮನ್, ಪಂಪ್ ಆಪರೇಟರ್, ಜವಾನರು, ಸ್ವಚ್ಚತಾಗಾರರು, ಒಳಚರಂಡಿ ಕ್ಲೀನಿಂಗ್ ಇವರು ಗ್ರಾಪಂಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಇವರಿಗೆ ಸರ್ಕಾರದಿಂದ ಸರಿಯಾಗಿ ಸೌಲಭ್ಯಗಳು, ಕನಿಷ್ಠ ವೇತನ ಸಿಗದೇ, ಸಂಕಷ್ಟದ ಜೀವನ ನಡೆಸುವಂತಾಗಿದೆ.

ಆದ್ದರಿಂದ ಗ್ರಾಪಂ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ಕನಿಷ್ಠ ವೇತನ ನೀಡಬೇಕು. ಪಿಂಚಣಿ, ಸೇವಾ ಹಿರಿತನ ಭತ್ಯೆ ಹೆಚ್ಚಳ, ಪಂಚಾಯಿತಿಗೊಂದು ಎಸ್.ಡಿ.ಎ, 2ನೇ ಡಿಇಓ ನೇಮಕಾತಿ ಮತ್ತು ಆರೋಗ್ಯ ವಿಮೆ ಜಾರಿಗೊಳಿಸಬೇಕು. ಸ್ವಚ್ಚವಾಹಿನಿಯರೆ ಒಡಂಬಡಿಕೆ ರದ್ದುಪಡಿಸಿ, ತರಬೇತಿ ಪಡೆದ ಎಲ್ಲರಿಗೂ ಕಡ್ಡಾಯ ಕೆಲಸದ ಜೊತೆಗೆ 7500 ರೂ.ಗಳ ಗೌರವಧನ ನೀಡಬೇಕು. ಸಿಂಗಲ್ ಚಾಲಕರನ್ನು ಪರಿಗಣಿಸಿ 15 ಸಾವಿರ ರೂ.ಗಳ ಗೌರವಧನ ನೀಡಬೇಕು. ಹೀಗೆ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರು ಚಲೋ ಮೂಲಕ ಸರ್ಕಾರಕ್ಕೆ ಒತ್ತಾಯಿಸಲಾಗುವುದು. ಈ ಹೋರಾಟದಲ್ಲಿ ಕಂಪ್ಲಿ ಸೇರಿದಂತೆ ಜಿಲ್ಲೆಯಲ್ಲಿ 500ಕ್ಕೂ ಹೆಚ್ಚು ಗ್ರಾಪಂ ಸಿಬ್ಬಂದಿಗಳು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಪಂ ನೌಕರರ ಸಂಘದ ರಾಜ್ಯ ಸಹ ಕಾರ್ಯದರ್ಶಿ ನೆಲ್ಲುಡಿ ರಾಜಸಾಬ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೀರಸೇನರೆಡ್ಡಿ, ತಾಲೂಕು ಅಧ್ಯಕ್ಷ ಜಡೆಪ್ಪಸ್ವಾಮಿ, ಉಪಾಧ್ಯಕ್ಷ ಹೆಚ್.ಗಾದಿಲಿಂಗಪ್ಪ, ಪ್ರಧಾನ ಕಾರ್ಯದರ್ಶಿ ಚಾಂದ್‌ಬಾಷಾ, ಖಜಾಂಚಿ ಚಂದ್ರಶೇಖರ ಸೇರಿದಂತೆ ತಾಲೂಕು ಸಂಘದ ನೌಕರರು, ಮುಖಂಡರು ಇದ್ದರು.
ವರದಿ : ಜಿಲಾನಸಾಬ್ ಬಡಿಗೇರ್

# ವೈದ್ಯ ದಿನಾಚರಣೆ ಅಂಗವಾಗಿ ಕಾರುಣ್ಯಾಶ್ರಮದಲ್ಲಿ ಡಾ.ಚನ್ನನಗೌಡ ಪಾಟೀಲ್ ಅವರಿಂದ ಫ್ಯಾನ್ ಗಳ ಅಳವಡಿಕೆ ಹಾಗೂ ಮಹಾಪ್ರಸಾದ ಸೇವೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಆರ್.ಜಿ. ಪಾಟೀಲ್ ಕಣ್ಣಿನ ಆಸ್ಪತ್ರೆಯ ಖ್ಯಾತ ನೇತ್ರ ತಜ್ಞರು ಹಾಗೂ ಸಮಾಜ ಸೇವಕರು ಮತ್ತು ಕಾರುಣ್ಯ ಆಶ್ರಮದ ಸಲಹಾ ಸಮಿತಿಯ ಹಿರಿಯರಾದ ಡಾ. ಚನ್ನನಗೌಡ ಆರ್ ಪಾಟೀಲ್ ಅವರು ಅಂತರಾಷ್ಟ್ರೀಯ ವೈದ್ಯ ದಿನಾಚರಣೆ ಅಂಗವಾಗಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ.**

ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಅವಶ್ಯಕತೆಯಿದ್ದ ಫ್ಯಾನ್ ಗಳನ್ನು ಅಳವಡಿಸಿ ಮಹಾಪ್ರಸಾದ ಸೇವೆಯನ್ನು ಸಲ್ಲಿಸುವುದರ ಮೂಲಕ ಆಶ್ರಮದಲ್ಲಿನ ಆಶ್ರಯದಾತುರುಗಳಾದ ವೃದ್ಧರ ಹಾಗೂ ವಯಸ್ಕರ ಬುದ್ಧಿಮಾಂದ್ಯ-ರಿಗೆ ಆತ್ಮಸ್ಥೈರ್ಯ ತುಂಬುವ ಮೂಲಕ ವೈದ್ಯ



ದಿನಾಚರಣೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ ಅವರು ಆಶ್ರಮದ ನಿರ್ವಹಣೆಯ ಕುರಿತು ಸಂಪೂರ್ಣವಾಗಿ ವಿವರಣೆ ನೀಡಿ ಆಶ್ರಮ ಹುಟ್ಟಿಗೆ ಮೂಲ ಕಾರಣಿಕರ್ತರಾಗಿ ಈ ಸೇವೆಗೆ ಸ್ಪೂರ್ತಿ ತುಂಬಿದ್ದಾರೆ. ಕಲ್ಯಾಣ ಕರ್ನಾಟಕದ ಸಮಾಜ ಸೇವಕರುಗಳಿಗೆ ಮಾದರಿಯದ ಇವರು ಮತ್ತು ಇವರ ಕುಟುಂಬ ಸಮಾಜಕ್ಕಾಗಿ ಹಲವಾರು ಕೊಡುಗೆಗಳನ್ನು ನೀಡುತ್ತಾ ಬಂದಿದೆ.

ಪ್ರಥಮವಾಗಿ ಕಾರುಣ್ಯ ಆಶ್ರಮದಲ್ಲಿನ ಆಶ್ರಯದಾತುರುಗಳ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿ ಆಶ್ರಮಕ್ಕೂ ಕೂಡ ಯುಪಿಎಸ್ ಅಳವಡಿಸಿ ಅನಾಥರಿಗೆ ದೃಷ್ಟಿಯ ಮೂಲಕ ಬೆಳಕು ಚೆಲ್ಲಿ ಆಶ್ರಮಕ್ಕೂ ಕೂಡ ಬೆಳಕಾಗಿದ್ದರು. ಇವರ ನಿರಂತರ ಸಹಾಯ ಸಹಕಾರವೇ ಕಾರುಣ್ಯ ಆಶ್ರಮಕ್ಕೆ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ತುಂಬಿದಂತಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಇವರ ಸೇವೆ ಬರಿ ಸಿಂಧನೂರಲ್ಲದೇ ನಾಡಿಗೆ ದೊರೆಯುತ್ತಿರುವುದು ನಮ್ಮ ಸಿಂಧನೂರಿನ ಘನತೆ ಗೌರವವನ್ನು ಹೆಚ್ಚಿಸಿದೆ. ಇವರು ಆಶ್ರಮಕ್ಕೆ ಬಂದ ತಕ್ಷಣ ಆಶ್ರಯದಾದರೂಗಳು ಸ್ವಂತ ಕುಟುಂಬದ ರಕ್ತ ಸಂಬಂಧಿಗಳ ಹಾಗೆ ಅವರ ಜೊತೆ ಬೆರೆಯುತ್ತಿರುವುದನ್ನು ನೋಡಿದರೆ ಒಂದು ಕ್ಷಣ ನನ್ನ ಕಣ್ಣಲ್ಲಿ ಆನಂದ ಭಾಷ್ಪಗಳು ಬಂದು ನನ್ನ ಸೇವೆಯು ಸಾರ್ಥಕವಾಗಿದೆ.

ಎಂದೆನಿಸುತ್ತದೆ ಎಂದು ಮಾತನಾಡಿ ಡಾ. ಚನ್ನನಗೌಡ.ಆರ್. ಪಾಟೀಲ್ ಹಾಗೂ ಸಿಂಧನೂರಿನ ಸಮಸ್ತ ವೈದ್ಯರುಗಳಿಗೆ ವೈದ್ಯ ದಿನಾಚರಣೆಯ ಹಾರ್ದಿಕ ಶುಭಾಶಯಗಳು ತಿಳಿಸಿದರು. ಈ ಸಮಯದಲ್ಲಿ ಬಶೀರ್ ಯತ್ಮಾರಿ ಕೋಶಾಧ್ಯಕ್ಷರು ಕಾರುಣ್ಯ ಆಶ್ರಮ. ಸಾಜೀ. ಸಿ. ಪಾಟೀಲ್. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಮತ್ತು ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮ-ರಿಯಪ್ಪ ಜ್ಯೋತಿ ಅನೇಕರು ಉಪಸ್ಥಿತರಿದ್ದರು.


# ನೇಮಕಾತಿ ಪ್ರಕಟಣೆ

ಬೆಂಗಳೂರು ಸಿವಿಲ್ ಕೋರ್ಟ್ ನೇಮಕಾತಿ 2026 ? 88 ಪಿಯೋನ್, ಚಾಲಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 29, 2026 ಬೆಂಗಳೂರು ಸಿವಿಲ್ ಕೋರ್ಟ್ ನೇಮಕಾತಿ 2026: 88 ಪಿಯೋನ್, ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬೆಂಗಳೂರು ಸಿವಿಲ್ ಕೋರ್ಟ್ ಜೂನ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಪಿಯೋನ್, ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜುಲೈ 30, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 01–07–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–ಜುಲೈ–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 30–07–2026 ಅಧಿಕೃತ ವೆಬ್‌ಸೈಟ್: bengaluru.dcourts.gov.in

# ಒಂದು ಎಕರೆ ಇಪ್ಪತ್ತು ಗುಂಟೆ ಭೂಮಿ ದಾನ ನೀಡಿದ ಕೆ ಅಮರೇಗೌಡ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಸಂತೆಕೆಲ್ಲೂರು ಹೋಬಳಿಯ ಮುಸಲಿ ಕಾರಲುಕುಂಟಿ ಗ್ರಾಮದ ವಸತಿ ರೈತ ಕುಟುಂಬಗಳಿಗೆ ನಿವೇಶನ ಹಂಚಿಕೆಗಾಗಿ ಆಶ್ರಯ ಯೋಜನೆ ಅಡಿ ಮನೆಗಳ ನಿರ್ಮಾಣಕ್ಕಾಗಿ ಒಂದು ಎಕರೆ ಇಪ್ಪತ್ತು ಗುಂಟೆ ಕೆ ಅಮರೇಗೌಡ ಅವರು ಭೂಮಿಯನ್ನು ದಾನವಾಗಿ ಗ್ರಾಮ ಪಂಚಾಯಿತಿಗೆ ನೀಡಿದ್ದಾರೆ.**



ಅವರ ಇಚ್ಛೆಯಂತೆ ಸುಮಾರು 23 ವಸತಿ ರಹಿತ ಕುಟುಂಬಗಳಿಗೆ ನೆರವಾಗಿದ್ದಾರೆ. ಕೆ ಅಮರೇಗೌಡರು ಮುಸಲಿ ಕಾರಲಕುಂಟಿ ಗ್ರಾಮದ ಬಡವರ ಬಗ್ಗೆ ಅಪಾರ ಪ್ರೀತಿ ಹೊಂದಿದ್ದಾರೆ. ಗ್ರಾಮದಲ್ಲಿ ಯಾವ ಬಡವರು ಮನೆಗಳು ಇಲ್ಲದೆ ವಂಚಿತರಾಗಬಾರದು ಎಂದು 20 ವರ್ಷಗಳ ಹಿಂದೆ ತಮ್ಮ ಮಗನಾದ ದಿ. ಚಂದ್ರಶೇಖರ ಹೆಸರಿನಲ್ಲಿ ಮನೆಗಳು ನಿರ್ಮಾಣ ಮಾಡಿಕೊಡಲು ಭೂಮಿಯನ್ನೇ ಬಡವರಿಗೆ ಕೊಟ್ಟಿದ್ದರು. ಸಂತೆಕೆಲ್ಲೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗರಾಜ ಅವರಿಗೆ ಹಸ್ತಾಂತ-ರಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಕೆ ಅಮರೇಗೌಡ 20 ವರ್ಷದ ಹಿಂದೆ ನನ್ನ ಮಗನ ಹೆಸರಿನ ಸ್ಮರಣಾರ್ಥಕವಾಗಿ ಮನೆಗಳ ಇಲ್ಲದವರಿಗೆ ನಾವು ದಾನವಾಗಿ ಮನೆ ನಿರ್ಮಾಣ ಮಾಡಿಕೊಳ್ಳಲು 1 ಎಕರೆ 20 ಗುಂಟೆ ನಿವೇಶನ ಹಂಚಿಕೆಗೆ ನೀಡಿದ್ದೆವು ಎಂದು ಹೇಳಿದರು. ಈ ಸಂದರ್ಭದಲ್ಲಿ ಹನುಮಂತಪ್ಪ ವೆಂಕಟಾಪೂರ,ಮಲ್ಲಯ್ಯ ಬಳ್ಳಾ ಹಾಗೂ ಗ್ರಾಮಸ್ಥರು ಇದ್ದರು.

# ಕಲಕೇರಿ ಗ್ರಾ.ಪಂ.ಅವ್ಯವಹಾರ ತನಿಖೆಗೆ ಮನವಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಿನ ಕಲಕೇರಿ ಗ್ರಾಮ ಪಂಚಾಯತಿ ಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ತನಿಖೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಡಿ.ಜಿ.ಸಾಗರ ಬಣ) ಕಲಕೇರಿ ವಲಯದವರು ಹಲವು ಬಾರಿ ಮನವಿ ಮಾಡಿದರೂ ಕ್ರಮ ಜರುಗಿಸಿಲ್ಲವೆಂದು ಆರೋಪಿಸಿ ತಾಳಿಕೋಟೆ ತಾ.ಪಂ.ಕಚೇರಿಗೆ ಬಂದು ಸಮಿತಿಯವರು ತಾ.ಪಂ.ಇಓ ಅವರಿಗೆ ಮನವಿ ಸಲ್ಲಿಸಿದರು.**



ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಅನಸೂಯಾ ಚಲವಾದಿಯವರು ಒಂದು ವಾರದೊಳಗೆ ಅಗತ್ಯ ಕ್ರಮದ ಭರವಸೆ ನೀಡಿದರು. ಈ ಸಮಯದಲ್ಲಿ ತಹಶೀಲ್ದಾರ ಡಾ.ವಿನಯಾ ಹೂಗಾರ, ಸಿಪಿಐ ಫಸಿಯುದ್ದಿನ್, ಪಿಎಸೈ ಜ್ಯೋತಿ ಖೋತ, ಕಲಕೇರಿ ವಲಯ ಸಂಚಾಲಕ ಹಣಮಂತ ವಡ್ಡರ, ಪದಾಧಿಕಾ-ರಿಗಳಾದ ಸೋಮಶೇಖರ ಬಡಿಗೇರ, ದೇವೀಂದ್ರ ವಡ್ಡರ, ಸದ್ದಾಂ ತುಂಬಗಿ, ಭಾಷಾಸಾಬ ಮನಗೂಳಿ, ಸಲೀಂ ನಾಯ್ಕೊಡಿ, ಪ್ರಕಾಶ ದೊಡಮನಿ ಇತರರಿದ್ದರು.

# ಮಾನವಿಯಲ್ಲಿ ಗ್ರಾಮೀಣ ಹಾಗೂ ಸಂಚಾರಿ ಪೊಲೀಸ್ ಠಾಣೆ ಆರಂಭಕ್ಕೆ ಆಗ್ರಹಿಸಿ ಎಸ್‌ಪಿಗೆ ಮನವಿ



ನೈಜ್ಯ ದೆಸೆ ನ್ಯೂಸ್

**ಮಾನವಿ: ಮಾನವಿ ಪಟ್ಟಣದಲ್ಲಿ ಗ್ರಾಮೀಣ ಪೊಲೀಸ್ ಠಾಣೆ ಹಾಗೂ ಸಂಚಾರಿ (ಟ್ರಾಫಿಕ್) ಪೊಲೀಸ್ ಠಾಣೆಯನ್ನು ಮಂಜೂರು ಮಾಡುವಂತೆ ಆಗ್ರಹಿಸಿ, ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಮಾನವಿ ತಾಲೂಕು ಅಧ್ಯಕ್ಷ ನಾಸೀರ್ ಖುರೇಷಿ ಅವರು ಬುಧವಾರ ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ-ರಿಗಳ ಕಚೇರಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗು ಗಿರಿ ಅವರಿಗೆ ಮನವಿ ಸಲ್ಲಿಸಿದರು.**

ಗೃಹ ಸಚಿವರಿಗೆ ಸಲ್ಲಿಸಿರುವ ಮನವಿಯ ಪ್ರತಿಯನ್ನು ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿಗಳಿಗೆ ನೀಡಿದ ಅವರು, ಮಾನವಿ ತಾಲೂಕಿನಲ್ಲಿ ಕೇವಲ ಒಂದೇ ಪೊಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿದ್ದು, ವ್ಯಾಪಕ ಗ್ರಾಮೀಣ ಪ್ರದೇಶ, ಹೆಚ್ಚುತ್ತಿರುವ ಜನಸಂಖ್ಯೆ, ವಾಹನ ದಟ್ಟಣೆ ಹಾಗೂ ಅಪಘಾತ ಪ್ರಕರಣಗಳನ್ನು ಪರಿಣಾಮಕಾ-ರಿಯಾಗಿ ನಿರ್ವಹಿಸಲು ಪ್ರತ್ಯೇಕ ಗ್ರಾಮೀಣ ಪೊಲೀಸ್ ಠಾಣೆ ಮತ್ತು ಸಂಚಾರಿ ಪೊಲೀಸ್ ಠಾಣೆಯ ಅಗತ್ಯವಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ. ಇದಲ್ಲದೆ, ಮಾನವಿ ವ್ಯಾಪ್ತಿಯಲ್ಲಿ ನಿರ್ಮಾಣಗೊಂಡಿರುವ ಚತುಷ್ಪಥ ರಸ್ತೆಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳು, ಸಂಚಾರ ನಿಯಂತ್ರಣದ ಸಮಸ್ಯೆಗಳು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹೆಚ್ಚುವರಿ ಪೊಲೀಸ್ ಮೂಲಸೌಕರ್ಯ ಒದಗಿಸಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಅವರು ಕೋರಿದರು.

ಈ ಮನವಿಯನ್ನು ಮಾನ್ಯ ಗೃಹ ಸಚಿವರಿಗೆ ಉದ್ದೇಶಿಸಿ ಸಲ್ಲಿಸಲಾಗಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಸಹ ಪ್ರತಿಗಳನ್ನು ರವಾನಿಸಲಾಗಿದೆ. ಈ ಸಂದರ್ಭದಲ್ಲಿ ಎಐಎಂಐಎಂ ತಾಲೂಕು ಪ್ರಧಾನ ಕಾರ್ಯದರ್ಶಿ ಮೆಹಬೂಬ್ ಪಾಷಾ, ಅನ್ವರ್ ಸಾಹೇಬ್ ಬೋರ್‌ವೆಲ್, ಅವಿನಾಶ್ ನಾಯಕ್, ವಾರ್ಡ್ ನಂ. 10ರ ಅಧ್ಯಕ್ಷ ಭೀಮೇಶ್, ಹನೀಫ್ ಖುರೇಷಿ, ಸೈಯದ್ ಕ-ರೀಂ, ಸೈಯದ್ ವಹಾಬ್, ವಾರ್ಡ್ ನಂ. 2ರ ಅಧ್ಯಕ್ಷ ಎಂ.ಡಿ. ರಾಜಾ ಹಾಗೂ ವಾರ್ಡ್ ನಂ. 25ರ ಅಧ್ಯಕ್ಷ ಎಂ.ಡಿ. ರಾಜಾ ಉಪಸ್ಥಿತರಿದ್ದರು.

# ಸುಮಾರು 63 ಲಕ್ಷ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ತಾಲೂಕಿನ ಗ್ರಾಮೀಣ ಭಾಗದಲ್ಲಿ ವಿವಿಧ ಯೋಜನೆಯಡಿ ಸುಮಾರು 63 ಲಕ್ಷ ವೆಚ್ಚದ ನಾನಾ ಅಭಿವೃದ್ಧಿ ಕಾಮಗಾ-ರಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಕೆ.ಶ್ರೀನಿವಾಸರಾವ್ ಇವರು ಬುಧವಾರ ಶಂಕುಸ್ಥಾಪನೆ ನೆರವೇರಿಸಿದರು.**

ತಾಲೂಕಿನ ಮೆಟ್ರಿ ಗ್ರಾಪಂಯ ಉಪ್ಪಾರಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥ-'ಮಿಕ ಶಾಲಾ ಆವರಣದಲ್ಲಿ 2024–25ನೇ ಸಾಲಿನ ರಾಜ್ಯ ವಲಯ ಯೋಜನೆಯಡಿ ಅನುದಾನದಲ್ಲಿ ಸುಮಾರು 43 ಲಕ್ಷ ವೆಚ್ಚದಲ್ಲಿ 3 ಕೊಠಡಿ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ಪೂಜೆ ಸಲ್ಲಿಸಲಾಯಿತು. ನಂತರ ಕೆ.ಶ್ರೀನಿವಾಸರಾವ್ ಮಾತನಾಡಿ, ಮಾನ್ಯ



ಶಾಸಕ ಜೆ.ಎನ್.ಗಣೇಶ್ ಅವರು ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಕಾರ್ಯಗಳೊಂದಿಗೆ ಮಾದರಿ ಕ್ಷೇತ್ರವನ್ನಾಗಿ ಮಾಡುತ್ತಿದ್ದಾರೆ. ಅತಿ ಶೀಘ್ರದಲ್ಲಿಯೇ ಶಾಸಕ ಗಣೇಶ್ ಅವರು ಸಚಿವರಾಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ನೆಣಕಿ ಗಿರಿ, ಸಿಆರ್‌ಪಿಗಳಾದ ಗಂಗಾಧರ, ಪ್ರಭಾಕರ, ಅಧ್ಯಕ್ಷ ಹನುಮಂತಪ್ಪ, ಉಪಾಧ್ಯಕ್ಷ ಕನಕಪ್ಪ, ಮುಖ್ಯಗುರು ಸಂಗನಗೌಡ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಹನುಮಂತಪ್ಪ, ಮುಖಂಡರಾದ ಹನುಮನಗೌಡ ಸೇರಿದಂತೆ ಸ್ಥಳೀಯ ಮುಖಂಡರು, ಶಿಕ್ಷಕ ವೃಂದವರು ಪಾಲ್ಗೊಂಡಿದ್ದರು. ಅರಳಿಹಳ್ಳಿ ತಾಂಡ: ಇಲ್ಲಿನ ಸಣಾಪುರ ಗ್ರಾಪಂಂ-ಯ ಅರಳಿಹಳ್ಳಿ ತಾಂಡದಲ್ಲಿ 2018–20ನೇ ಸಾಲಿನ ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಸುಮಾರು 20 ಲಕ್ಷ ವೆಚ್ಚದಲ್ಲಿ ನಿರ್ಮಿಸಲಿರುವ ಅಂಗನವಾಡಿ–2 ಕೇಂದ್ರದ ಕಟ್ಟಡ ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಪ್ರಧಾನ ಕಾರ್ಯದರ್ಶಿ ರಘುನಾಯಕ, ಮುಖಂಡರಾದ ಗವಿಸಿದ್ದಪ್ಪ, ಕರೇಕಲ್ ಮನೋಹರ ಸೇರಿದಂತೆ ಸ್ಥಳೀಯ ಮುಖಂಡರಿದ್ದರು.

ವರದಿ : ಜಿಲಾನಸಾಬ್ ಬಡಿಗೇರ್

# ವೈದ್ಯಕೀಯ ವ್ಯಾಸಾಂಗಕ್ಕೆ ನೆರವು ; ಅರವಿಂದ್ ಗೌಡ ಪಾಟೀಲರಿಗೆ ಗ್ರಾಮಸ್ಥರ ಪ್ರಶಂಸೆ



ನೈಜ್ಯ ದೆಸೆ ನ್ಯೂಸ್

**ಯಲಬುರ್ಗಾ: ತಾಲ್ಲೂಕಿನ ವಜ್ರಬಂಡಿ ಗ್ರಾಮದ ನಾಗರಾಜ ಬಸಪ್ಪ ಪೂಜಾರ ಎನ್ನುವ ಬಡ ವಿದ್ಯಾರ್ಥಿಯ ಮುಂದಿನ ವ್ಯಾಸಾಂಗಕ್ಕೆ ಆರ್ಥಿಕ ಸ್ಥಿತಿ ಎದುರಾದಾಗ ಸಹಾಯಕ್ಕೆ ನಿಂತು, ಮಾನವೀಯ ಹೃದಯ ಶ್ರೀಮಂತಿಕೆಗೆ ಹೆಸರಾದ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಹಾಗೂ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಅರವಿಂದ್ ಗೌಡ ಶಿವಶರಣಪ್ಪಗೌಡ ಪಾಟೀಲ್ ಅವರು ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು.**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಾಲೇಜಿನಲ್ಲಿ 4ನೇ ವರ್ಷದ ವ್ಯಾಸಾಂಗ ಮಾಡುತ್ತಿರುವ ನಾಗರಾಜ, ಆರ್ಥಿಕವಾಗಿ ತೊಂದಯನ್ನು ಅನುಭವಿಸುತ್ತಿದ್ದರು, ಇವರ ನೆರವಿಗೆ ಬಂದ ಅರವಿಂದಗೌಡರು ವಿದ್ಯಾರ್ಥಿಯ ಭವಿಷ್ಯಕ್ಕೆ ನೆರವಾಗಲಿ ಎಂಬ ಸುದುದ್ದೇಶದೊಂದಿಗೆ ಧನಸಹಾಯ ನೀಡಿ, ವಿದ್ಯಾರ್ಥಿಯ ಉನ್ನತ ವಿದ್ಯಾಭ್ಯಾಸಕ್ಕೆ ಬೆಂಬಲ ನೀಡಿದರು. ಅವರ ಈ ಸಮಾಜಮುಖಿ ಕಾರ್ಯಕ್ಕೆ ಗ್ರಾಮದ ಎಲ್ಲೆಡೆಯಿಂದ ಕೃತಜ್ಞತೆ ಮಾತುಗಳ ಮಹಾಪೂರವೇ ಹರಿದು ಬಂದಿತು.


ಗ್ರಾಮದ ಮುಖಂಡರಾದ ರೇವಣಪ್ಪ ಮ್ಯಾಗೇರಿ, ಕನಕಪ್ಪ ಪೂಜಾರ, ಹನಮಂತಪ್ಪ ಉಪ್ಪಾರ, ರಾಮಣ್ಣ ಪೂಜಾರ, ದೇವಪ್ಪ ಪೂಜಾರ, ಶರಣಗೌಡ ಪಾಟೀಲ್, ಯಲ್ಲಪ್ಪ ಹಳ್ಳಿಗುಡಿ, ಹಂಪಯ್ಯ ಹಿರೇಮಠ, ತಿರುಪತಿ ರಾಠೋಡ, ಭೀಮಪ್ಪ ಹರಿಜನ, ಮೌನೇಶ್ ನಾಯಕ, ಅಮರೇಶ್ ಕರಮುಡಿ, ದುರಗಪ್ಪ ತಳವಾರ, ಶರಣಪ್ಪ ಬಿ.ಉಪ್ಪಾರ ಸೇರಿದಂತೆ ಗ್ರಾಮದ ಮುಖಂಡರು ಮತ್ತು ಯುವಕರು ಅಭಿನಂದನೆಗಳನ್ನು ತಿಳಿಸಿದರು.

# ಯುವಕನ ಕಿರುಕುಳ, ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಆರೋಗ್ಯ ಸಿಬ್ಬಂದಿ

ನೈಜ್ಯ ದೆಸೆ ನ್ಯೂಸ್

**ನಾಲತವಾಡ: ಸ್ಥಳೀಯ ಯುವಕನೋರ್ವ ಕರ್ತವ್ಯಕ್ಕೆ ಅಡ್ಡಿ ಪಡಿಸುವುದಲ್ಲದೆ, ಕಳೆದ ಒಂದು ವರ್ಷದಿಂದ ಉದ್ದೇಶಪೂರ್ವಕವಾಗಿ ನನ್ನ ವಿಡಿಯೋ,ಪೋಟೋ ಚಿತ್ರಿಕರಣ ಮಾಡಿ ಅಧಿಕಾರಿಗಳಿಗೆ ಹರಿ ಬಿಡುತ್ತಿದ್ದಾನೆ ಎಂದು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಹೊರ ಗುತ್ತಿಗೆ ಮಹಿಳಾ ಸಿಬ್ಬಂದಿಯೋರ್ವರು ಮಂಗಳವಾರ ಆಸ್ಪತ್ರೆಯಲ್ಲೇ ಮಾತ್ರೆಗಳನ್ನು ನುಂಗಿ ಪ್ರಾಣ ಬಿಡಲು ಯತ್ನಿಸಿದ ಘಟನೆ ನಡೆದಿದೆ.**

ಬೆಳಿಗ್ಗೆ ಕರ್ತವ್ಯಕ್ಕೆ ಆಗಮಿಸಿದ ಸ್ಥಳೀಯ ಸಿಬ್ಬಂದಿ ಕುಸುಮಾ ಹುಡೇದ ಎಂಬುವರೇ ಮಾತ್ರೆ ಸೇವಿಸಿ ಪ್ರಾಣ ಬಿಡಲು ಯತ್ನಿಸಿದವರು, ತಕ್ಷಣ ಘಟನೆ ಗಮನಿಸಿದ ಸ್ಥಳದಲ್ಲಿದ್ದ ಸಿಬ್ಬಂದಿಗಳು ಮುದ್ದೇಬಿಹಾಳದ ತಾಲ್ಲೂಕಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಗೆ ಏರ್ಪಾಡು ಮಾಡಿದ್ದಾರೆ. ಏನಿದು ಘಟನೆ? ಸುಮಾರು ಒಂದು ವರ್ಷದಿಂದಲೂ ಸ್ಥಳೀಯ ಸಾಮಾಜೀಕ




ಹೋರಾಟಗಾರ 2–3 ದಿನಕ್ಕೊಮ್ಮೆ ರಾತ್ರಿ ಹಗಲು ಎನ್ನದೇ ತಾವು ಕರ್ತವ್ಯ ನಿರ್ವಹಿಸುವ ವೇಳೆ ಏಕಾ ಏಕಿ ಬಂದು ವಿಡಿಯೋ ಚಿತ್ರೀಕರಿಸಿ ಸಾಮಾಜಿಕ ಜಾಲ ತಾಣ ಹಾಗೂ ಅಧಿಕಾರಿಗಳಿಗೆ ಹರಿ ಬಿಟ್ಟು ಭಯ ಹುಟ್ಟಿಸುತ್ತಿದ್ದನು, ಕುಸುಮಾ ಅವರನ್ನು ಕೆಲಸದಿಂದ ಬಿಡುಗಡೆ ಮಾಡಬೇಕು ಎಂದು ಹೊರ ಗುತ್ತಿಗೆಯ ಸಂಸ್ಥೆಯವರಿಗೂ ಸಹ ಪತ್ರ ಬರೆದಿದ್ದ, ಸಂಸ್ಥೆಯವರು ಕುಸುಮಾ ಅವರಿಗೆ ಕೆಲಸದಿಂದ ವಜಾ ಮಾಡಿ ಪತ್ರವೂ ನೀಡಿದ್ದರು.

ಅತ್ತ ಮಾತ್ರೆ ನುಂಗಿದ ಘಟನೆ ಹಿಂದಿನ ದಿನವಷ್ಟೇ ಪೋಲೀಯೋ ಲಸಿಕೆ ದಿನವೂ ಬಂದು ವಿನಾಃ ಕಾರಣ ಸಂತ್ರಸ್ತೆ ಕುಸುಮಾ ಕೆಲಸ ಮಾಡುತ್ತಿದ್ದ ವೇಳೆ ವಿಡಿಯೋ ಮಾಡಿದ್ದ ಎನ್ನಲಾಗಿದೆ. ಅತ್ತ ನಾನು 10 ವರ್ಷದಿಂದ ಕೆಲಸ ಮಾಡುತ್ತಿದ್ದೆ ನನ್ನನ್ನು ವಜಾ ಮಾಡುತ್ತಿದ್ದಾರೆ ಎನ್ನುವ ಕಿರುಕುಳಕ್ಕೆ ಬೇಸತ್ತ ಕುಸುಮಾ ಮಾತ್ರೆ ಸೇವನೆ ಮಾಡಿದ್ದಾಳೆ ಎಂದು ಸಂಭಂದಿಕರು ಆರೋಪಸಿದ್ದಾರೆ.

ಪ್ರತಿಭಟನೆ: ಮೇಲಿಂದ ಮೇಲೆ ವಿಡಿಯೋ ಚಿತ್ರೀಕರಣ ಮಾಡುವ ಪರಿಣಾಮ ನಮಗೆ ರಕ್ಷಣೆ ಇಲ್ಲದಂತಾಗಿದೆ, ಎಲ್ಲರ ಕರ್ತವ್ಯಕ್ಕೂ ಸಹ ಅಡಚಣೆ ಉಂಟು ಮಾಡುತ್ತಿದ್ದಾನೆ ನಾವು ಕರ್ತವ್ಯ ಮಾಡಲ್ಲ ಎಂದು ಆಸ್ಪತ್ರೆಯ ಹೊರ ಭಾಗದಲ್ಲಿ ಸಿಬ್ಬಂದಿಗಳು ಪ್ರತಿಭಟನೆ ನಡೆಸಿದರು.

ಅಧಿಕಾರಿಗಳ ಭೇಟಿ: ಘಟನೆಗೆ ಅರಿತ ತಹಶೀಲ್ದಾರ ಕೀರ್ತಿ ಚಾಲಕ, ಟಿಎಚ್‌ಓ ಡಾ.ಸತೀಶ ತಿವಾರಿ, ಪಿಎಸ್‌ಐ ಸಂಜಯ್ ತಿಪ್ಪಾರಡ್ಡಿ, ಆಡಳಿತಾಧಿಕಾರಿ ಡಾ.ಪರಶುರಾಮ ವಡ್ಡರ, ನಗರಾಭಿವೃದ್ಧಿ ಕೋಶ ಯೋಜನಾಧಿಕಾರಿ ಬಿ.ಎ.ಸೌದಾಗರ, ಪ.ಪಂ ಸಿಓ ಪ್ರಶಾಂತ್ ಸಿ. ಕಂದಾಯ ನಿರೀಕ್ಷಕರಾದ ವಿ.ವಿ.ಅಂಬಿಗೇರ ಸಂತ್ರಸ್ತೆ ಕುಟುಂಬಸ್ಥರು ಹಾಗೂ ಸಂಭಂದಿಕರೊಂದಿಗೆ ಸಭೆ ಕರೆದು ಚರ್ಚಿಸಿದ್ದು ಮುಂದಿನ ದಿನಗಳಲ್ಲಿ ಹೀಗಾಗದಂತೆ ಕ್ರಮ ವಹಿಸುತ್ತೇವೆ, ಆರೋಪಿ ಯಾರೇ ಇರಲಿ ತಾವು ಪ್ರಕರಣ ದಾಖಲಿಸಿದರೆ ಬಂಧಿಸುತ್ತೆವೆ ಪ್ರತಿಭಟನೆ ಕೈ ಬಿಡಿ ಎಂದು ಸ್ಥಳದಲ್ಲಿದ್ದ ಅಧಿಕಾರಿಗಳು ಮನವಿ ಮಾಡಿಕೊಂಡ ನಂತರ ಪ್ರತಿಭಟನೆ ಕೈಬಿಡಲಾಯಿತು.

ರಕ್ಷಣೆಗೆ ಒತ್ತಾಯ: ವೀರೇಶ ಆಲಕೊಪ್ಪರ ಎನ್ನುವ ಯುವಕ ವಿನಃ ಕಾರಣ ಆಸ್ಪತ್ರೆಗೆ ಬಂದು ತೊಂದ್ರೆ ಕೊಡುತ್ತಿದ್ದಾನೆ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರ ಹೆಸರು ದುರ್ಬಳಕೆ ಮಾಡುತ್ತಿದ್ದಾನೆ, ಗುತ್ತಿಗೆದಾರ-ರಿಗೆ ಹಾಗೂ ಆರೋಗ್ಯಾಧಿಕಾರಿಗಳಿಗೆ ವಿಡಿಯೋ ಹರಿ ಬಿಟ್ಟು ಹೆದರಿಸುತ್ತಿದ್ದು ನಮ್ಮ ಸೊಸೆ ಸಾವು ಬದುಕಿನ ಮದ್ಯೆ ಹೋರಾಡುತ್ತಿದ್ದಾಳೆ ನ್ಯಾಯ ಕೊಡಿಸಿ ಎಂದು ಬಸವರಾಜ ಹುಡೇದ ಅಧಿಕಾರಿಗಳಿಗೆ ಒತ್ತಾಯಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬ್ಯಾಚುಲರ್ ಆಫ್ ಫ್ಯಾಷನ್ ಡಿಸೈನ್

ಫ್ಯಾಷನ್ ವಿನ್ಯಾಸದಲ್ಲಿ ಬ್ಯಾಚುಲರ್ ಆಫ್ ಡಿಸೈನ್ (ಬಿ.ಡಿ.ಎಸ್) ಅನ್ನು ಒಟ್ಟಾರೆ ಅತ್ಯುತ್ತಮ ಕೋರ್ಸ್ ಎಂದು ವ್ಯಾಪಕವಾಗಿ ಪರಿಗಣಿಸಲಾಗಿದೆ. ಈ ಸಮಗ್ರ 4 ವರ್ಷಗಳ ಪದವಿಪೂರ್ವ ಪದವಿ ಸ್ಕೆಚಿಂಗ್ ಮತ್ತು ಪ್ಯಾಟರ್ನ್ ಮೇಕಿಂ-ಗ್‌ನಿಂದ ಸುಸ್ಥಿರ ವಿನ್ಯಾಸ ಮತ್ತು ಫ್ಯಾಷನ್ ವ್ಯವಹಾರ ನಿರ್ವಹಣೆ, ಹಿರಿಯ ಪಾತ್ರಗಳಿಗೆ ನಿಮ್ಮನ್ನು ಸಿದ್ಧಪಡಿಸುವುದು ಅಥವಾ ನಿಮ್ಮ ಸ್ವಂತ ಲೇಬಲ್ ಅನ್ನು ಪ್ರಾರಂಭಿಸುವವರೆಗೆ ಎಲ್ಲವನ್ನೂ ಒಳಗೊಂಡಿದೆ. "ಅತ್ಯುತ್ತಮ" ಕೋರ್ಸ್ ಅನ್ನು ಆಯ್ಕೆ ಮಾಡುವುದು ನಿಮ್ಮ ವೃತ್ತಿಜೀವನದ ಗುರಿಗಳು ಮತ್ತು ಪ್ರಸ್ತುತ ಸಮಯದ ಚೌಕಟ್ಟನ್ನು ಅವಲಂಬಿಸಿರುತ್ತದೆ: ಸಮಗ್ರ ವಿನ್ಯಾಸಕ್ಕಾಗಿ (ಬಿ.ಡಿ.ಎಸ್): 4-ವರ್ಷಗಳ ಬ್ಯಾಚುಲರ್ ಆಫ್ ಡಿಸೈನ್ ಉದ್ಯಮದ ಮಾನದಂಡವಾಗಿದೆ. ಇದು ಪ್ರಾಯೋಗಿಕ ತರಬೇತಿ, ಇಂಟರ್ನ್‌ಶಿಪ್‌ಗಳು ಮತ್ತು ಪೋರ್ಟ್‌ಫೋಲಿಯೊ ಅಭಿವೃದ್ಧಿಯನ್ನು ನೀಡುತ್ತದೆ. ತಾಂತ್ರಿಕ ಮತ್ತು ವೈಜ್ಞಾನಿಕ ಕೌಶಲ್ಯಗಳಿಗಾಗಿ (ಬಿ.ಎಸ್ಸಿ): 3-ವರ್ಷಗಳ ಬ್ಯಾಚುಲರ್ ಆಫ್ ಸೈನ್ಸ್ ಫ್ಯಾಬ್ರಿಕ್ ತಂತ್ರಜ್ಞಾನ, ಸಿಎಡಿ ಮತ್ತು ಉಡುಪು ಎಂಜಿನಿಯ-ರಿಂಗ್‌ಗೆ ಒಲವು ತೋರುತ್ತದೆ. ಪರ್ಲ್ ಅಕಾಡೆಮಿ ವೇಗದ ವೃತ್ತಿ ಪ್ರವೇಶಕ್ಕಾಗಿ: ಡಿಪ್ಲೊಮಾ ಅಥವಾ ಪ್ರಮಾಣಪತ್ರ ಕೋರ್ಸ್‌ಗಳು (1 ರಿಂದ 2 ವರ್ಷಗಳು) ವಿವರಣೆ ಅಥವಾ ಉಡುಪು ನಿರ್ಮಾಣದಂತಹ ನಿರ್ದಿಷ್ಟ ಕೌಶಲ್ಯಗಳಲ್ಲಿ ತ್ವರಿತ, ಉದ್ಯೋಗ-ಸಿದ್ಧ ತರಬೇತಿಯನ್ನು ಒದಗಿಸುತ್ತವೆ. ವ್ಯಾಪಾರ ಮತ್ತು ವ್ಯಾಪಾರಕ್ಕಾಗಿ: ಉಡುಪುಗಳ ಚಿಲ್ಲರೆ ವ್ಯಾಪಾರ, ಖರೀದಿ ಮತ್ತು ಮಾರುಕಟ್ಟೆಯ ಮೇಲೆ ಕೇಂದ್ರೀಕರಿಸುತ್ತದೆ, ನೀವು ಫ್ಯಾಷನ್ ಅನ್ನು ಪ್ರೀತಿಸುತ್ತಿದ್ದರೆ ಆದರೆ ಹೊಲಿಗೆಗಿಂತ ಸಂಘಟಿಸಲು ಬಯಸಿದರೆ ಇದು ಸೂಕ್ತವಾಗಿದೆ. ನಿಮ್ಮ ಕೌಶಲ್ಯಗಳನ್ನು ಬೆಳೆಸಲು ಉನ್ನತ ಫ್ಯಾಷನ್ ಸಂಸ್ಥೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳನ್ನು ಅನ್ವೇಷಿಸಲು, ಪರ್ಲ್ ಅಕಾಡೆಮಿಯಂತಹ ವೇದಿಕೆಗಳ ಮೂಲಕ ಲಭ್ಯವಿರುವ ಗುರುತಿಸಲ್ಪಟ್ಟ ಆಯ್ಕೆಗಳನ್ನು ಸಂಶೋಧಿಸುವುದು ಅಥ-ವಾ ನಿಜಕ್ಕೂ ವೃತ್ತಿಜೀವನ ಮಾರ್ಗದರ್ಶಿ ಮೂಲಕ ಕೋರ್ಸ್ ರೂಪರೇಷೆಗಳನ್ನು ಅನ್ವೇಷಿಸುವುದನ್ನು ಪರಿಗಣಿಸಿ.

## "ತ್ರಯಂಬಕೇಶ್ವರ ದೇವಸ್ಥಾನ ಜಾಗ ಉಳಿಯುವಿಗಾಗಿ ಹೋರಾಟ"

### ನಮ್ಮ ಹಿಂದೂ ದೇವಸ್ಥಾನಗಳ ಜಾಗ ಸೇರಿ ಅದರ ಸ್ವತ್ತುಗಳು ಉಳಿಸಿ ದೇವಸ್ಥಾನ ಅಭಿರುದ್ಧಿಗೆ ಬಳಸಬೇಕು

ನೈಜ್ಯ ದೆಸೆ ನ್ಯೂಸ್

**ಸಿರವಾರ: ತಾಲೂಕಿನ ಕವಿತಾಳ ಪಟ್ಟಣದ ಶ್ರೀ ತ್ರಿಯಂಬಕೇಶ್ವರ ದೇವಸ್ಥಾನ ಆವರಣದಲ್ಲಿ ಮಂಗಳವಾರ ಸಾರ್ವಜನಿಕರ ಸಭೆ ನಡೆಯಿತು. ಈ ಸಭೆಯ ಕುರಿತು ಮಾತನಾಡಿದ ಮುಖಂಡರಾದ ಅಲ್ಲಮ ಪ್ರಭು ಇತಿಹಾಸ ಪ್ರಸಿದ್ಧವಾದ ತ್ರಿಯಂಬಕೇಶ್ವರ ದೇವಸ್ಥಾನದ ಹಿಂದುಗಡೆ ಭಾಗದಲ್ಲಿ ಇರುವ ಜಾಗ ಒತ್ತುವರಿ ಮಾಡಿ ಜಾಗ ಕಬಳಿಸುವ ಸಂಚು ಮಾಡಿದ್ದಾರೆ. ಸುಮಾರು ವರ್ಷಗಳಿಂದ ತ್ರಿಯಂಬಕೇಶ್ವರ ದೇವಸ್ಥಾನ ಜಾಗಕ್ಕಾಗಿ ಹೋರಾಟ ಮಾಡುತ್ತಾ ಬಂದಿದ್ದೇವೆ.**

ಆಗಿನ ಕಾಲದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎನ್.ಎಸ್ ಬೋಸುರಾಜ್ ಅವರು ದೇವಸ್ಥಾನ ಹಿಂಬದಿಯ ಭಾಗದಲ್ಲಿ ವಾಸಿಸುವ ಜನರಿಗೆ ಬೋಸುರಾಜ್ ಕಾಲೋನಿಯನ್ನು ನಿರ್ಮಾಣ ಮಾಡಿ ಜನರಿಗೆ ವಾಸಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಾಣ ಮಾಡಿ, ಅಲ್ಲಿ ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ. ಆದರೂ ಜನರು ಅಲ್ಲಿಗೆ ಹೋಗದೆ ತ್ರಿಯಂಬಕೇಶ್ವರ ದೇವಸ್ಥಾನ ಹಿಂಭಾಗದ ಜಾಗದಲ್ಲಿ ವಾಸ ಮಾಡುತ್ತಿದ್ದಾರೆ. ಒಬ್ಬ ವ್ಯಕ್ತಿ ಬಂದು ನಿಮಗೆ ಜಾಗ ಕೊಡಿಸುತ್ತೇನೆ ಮತ್ತು ನಿಮಗೆ ಹಕ್ಕು ಪತ್ರ ಕೊಡಿಸುತ್ತೇನೆ ಎಂದು ಜನರಿಗೆ ಹೇಳಿದ್ದಾನೆ. ನಾವು ಇದರ ಕುರಿತು ಹೋರಾಟ ಮಾಡುತ್ತಾ ಬಂದಿದ್ದೇವೆ ಹಕ್ಕು ಪತ್ರ ಕೊಡುವುದಕ್ಕೆ ಬರುವುದಿಲ್ಲ ಇದು ದೇವಸ್ಥಾನದ



ಜಾಗ ದೇವಸ್ಥಾನಕ್ಕೆ ಮಾತ್ರ ಎಂದು ಊರಿನ ಜನರು ಸಂಘ-ಸಂಸ್ಥೆಗಳು ಮುಖಂಡರು ಪಂಚಾಯತಿಯ ಮುಂದೆ ಧರಣಿ ಮಾಡಿದ್ದೇವೆ. ಮೂಲ ದಾಖಲೆಗಳು ನಮ್ಮ ಬಳಿ ಇವೆ ಗ್ರಾಮ ಪಂಚಾಯತಿ ಇದ್ದಾಗ 2011ರಲ್ಲಿ ದೇವಸ್ಥಾನ ಜಾಗ ಕಡಿಮೆ ಇರುವುದರಿಂದ ಸಂತೆ ನಡೆಸುವುದಕ್ಕೆ ಮತ್ತು ಜಾತ್ರೆ ನಡೆಸುವುದಕ್ಕೆ ಮೀಸಲಿಡಲು ಗ್ರಾಮ ಪಂಚಾಯತಿಯ ಸದಸ್ಯರು ಒಪ್ಪಿಗೆ ನೀಡಿದ್ದು ದಾಖಲೆಗಳು ಇವೆ.

ಇದನ್ನು ಹಿಂದಕ್ಕೆ ತಳ್ಳಿ 8 ಎಕ್ಕರೆ 8 ಗುಂಟೆ ಸ್ಲಂ ಏರಿಯಾ ಎಂದು ಘೋಷಣೆ ಮಾಡಿದ್ದಾರೆ. ಕಮಿಷನರ್ ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಅವ-ರಿಗೂ ಕೂಡ ಪತ್ರವನ್ನು ನೀಡಿದ್ದೇವೆ. ರಾಯಚೂರು ಡಿಸಿ ಅವರಿಗೆ ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಪತ್ರ ನೀಡಿದ್ದೇವೆ ಅವರು ಇದರ ಬಗ್ಗೆ ಪರಿಶೀಲಿಸಿ ಮತ್ತು ಮರು ಸಮೀಕ್ಷೆ ಮಾಡಿ ಎಂದು ಹೇಳಿದ್ದಾರೆ. ನಾವು ಕೂಡ ಮರು ಸಮೀಕ್ಷೆ ಮಾಡಿ ಎಂದು ಮನವಿ ಪತ್ರ ಪಂಚಾಯತಿಗೆ ನೀಡಿದ್ದೇವೆ. ಆದರೂ ಮರು ಸಮೀಕ್ಷೆ ಮಾಡುವಾಗ ದೇವಸ್ಥಾನದ ಸದಸ್ಯರನ್ನಾಗಲಿ ಯಾರನ್ನು ಕರೆದುಕೊಂಡು ಹೋಗದೆ ಮರು ಸಮೀಕ್ಷೆ ಮಾಡಿದ್ದಾರೆ. 8 ಎಕರೆ 8 ಗುಂಟೆ ಎಂದು ಯಾವ ಆಧಾರದ ಮೇಲೆ ಮಾಡಿದ್ದಾರೆ, ಸರ್ವೆ ನಂಬರ್ ಮತ್ತು ಹಿಸ್ಸ ನಮೂನೆ ಮಾಡಿಲ್ಲ ಹಾಗೂ ಕೆಲ ಜನರಿಗೆ ಹಕ್ಕು ಪತ್ರ ನೀಡಿದ್ದಾರೆ.

ಆದರೆ ಸುಮಾರು ಸಾರಿ ಪಂಚಾಯತಿಗೆ ಬೇರೆ ಬೇರೆ ಚೀಫ್ ಆಫೀಸರ್ ಬಂದವರಿಗೆ ಇದರ ಬಗ್ಗೆ ಹೇಳಿದ್ದೇವೆ ಆದರೂ ಕೂಡ ಇವಾಗಿನ ಚೀಫ್ ಆಫೀಸರ್ ಅವರಿಗೆ ಕೂಡ ಎರಡು ಮೂರು ಬಾರಿ ಹೇಳಿದ್ದೇವೆ ಹಕ್ಕು ಪತ್ರ ನೀಡಬೇಡಿ ಮತ್ತು ನೋಂದಣಿ ಮಾಡಿಕೊಳ್ಳಬೇಡಿ ಎಂದು ಹೇಳಿದರು ಕೂಡ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಹಕ್ಕು ಪತ್ರ ನೀಡುವಾಗ ಅವರ ಮೂಲತ ಎಲ್ಲಿ ವಾಸವಾಗಿದ್ದಾರೆ ಎಂದು ತಿಳಿಯದೆ ಅವರಿಗೆ ಹಕ್ಕು ಪತ್ರ ನೀಡಿದ್ದಾರೆ. ಅವರ ಆಧಾರ್ ಕಾರ್ಡ್ ಮತ್ತು ವೋಟರ್ ಐಡಿ ಬೇರೆ ಬೇರೆ ವಾರ್ಡ್‌ಗಳಲ್ಲಿ ಇವೆ ಇಲ್ಲಿ ಸುಮಾರು ವರ್ಷಗಳಿಂದ ಫಕೀರರು ಮಾತ್ರ ವಾಸವಿದ್ದರು, ಇಷ್ಟೆಲ್ಲಾ ದಾಖಲೆಗಳು ಇದ್ದರೂ ಕೂಡ 25 ಜನರಿಗೆ ಹಕ್ಕು ಪತ್ರ ನೀಡುವುದಾಗಿ ನೋಟಿಸ್ ಹಾಕಿರುತ್ತಾರೆ ಅದನ್ನು ಅಲ್ಲಮ ಪ್ರಭು ಅವರು ನೋಡಿ ಅದಕ್ಕೆ ದೂರು ನೀಡಿದ್ದಾರೆ.

ಯಾವುದೇ ಹಕ್ಕು ಪತ್ರ ಮತ್ತು ನೋಂದಣಿ ಮಾಡಿಕೊಳ್ಳಬೇಡಿ ಎಂದು ಪತ್ರವನ್ನು ನೀಡಿದ್ದೇವೆ, ಆದರೂ ಕೂಡ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ವಿರೋಧಿಸಿ ತ್ರಿಯಂಬಕೇಶ್ವರ ದೇವಸ್ಥಾನ ಜಾಗಕ್ಕಾಗಿ ಹಾಗೂ ಹಕ್ಕು ಪತ್ರ ನೀಡುವ ಮತ್ತು ನೋಂದಣಿ ಮಾಡಿಕೊಳ್ಳುವ ಕ್ರಮವನ್ನು ವಿರೋಧಿಸಿ ಊರಿನ ಜನರು ಮುಖಂಡರು ಸಂಘಟನೆಗಳೊಂದಿಗೆ ಹೋರಾಟ ಮಾಡಲಾಗುವುದೆಂದು ಅವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಊರಿನ ಪ್ರಮುಖರು, ಮುಖಂಡರು, ವಿವಿಧ ಸಂಘಟನೆ ಮುಖಂಡರು ಹಾಜರಿದ್ದರು.

## ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯಾಧಿಕಾರಿ ಪ್ರಲ್ಲಾದ್ ಐ. ಲಿ. ಇವರಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿಗನೂರು ಗ್ರಾಮದ ಶ್ರೀ ಜಡೆಸಿದ್ದೇಶ್ವರ ಎಜುಕೇಶನಲ್ ಟ್ರಸ್ಟ್ ವತಿಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಸರಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಪ್ರಲ್ಲಾದ್ ಐ. ಲಿ. ಇವರನ್ನು ಸನ್ಮಾನಿಸಲಾಯಿತು.

ಈ ವೇಳೆ ಟ್ರಸ್ಟ್ ಅಧ್ಯಕ್ಷ ಎಸ್. ರಾಮು ಮಾತನಾಡಿ ಸಮಾಜದ ಆರೋಗ್ಯಕ್ಕಾಗಿ ಅವಿರತ ಪ್ರಯತ್ನ ಮಾಡುವ ವೈದ್ಯರನ್ನು ಪ್ರತಿವರ್ಷ ಜುಲೈ ಒಂದರಂದು ಬಿಸಿ ರಾಯ್ ಜನ್ಮದಿನದ ಪ್ರಯುಕ್ತ ಆಚರಿಸುವ ಮೂಲಕ ವೈದ್ಯರು ತಮ್ಮ ಸೇವ ಮನೋಭಾವದ ಮೂಲಕ ರೋಗಿಗಳಿಗೆ ಆಶಾಕಿರಣ ವಾಗಿದ್ದಾರೆ ಎಂದರು.

ಸನ್ಮಾನ ಸ್ವೀಕರಿಸಿ ವೈದ್ಯಾಧಿಕಾರಿ ಡಾ. ಪ್ರಲ್ಲಾದ್ ಐ. ಲಿ. ಅವರು ಮಾತನಾಡುತ್ತಾ ಇಂದು ರಾಷ್ಟ್ರೀಯ ವೈದ್ಯರ ದಿನದಂದು ನನ್ನನ್ನು ಸನ್ಮಾನಿಸಿ ಗೌರವಿಸಿದ್ದಕ್ಕಾಗಿ ಶ್ರೀ ಜಡೆಸಿದ್ದೇಶ್ವರ ಎಜುಕೇಶನಲ್ ಟ್ರಸ್ಟ್‌ಗೆ ನಾನು ಆಭಾ-ರಿಯಾಗಿದ್ದೇನೆ. ವೈದ್ಯಕೀಯ ವೃತ್ತಿ ಎಂದರೆ ಕೇವಲ ಚಿಕಿತ್ಸೆ ನೀಡುವುದಲ್ಲ, ಅದು ಮನುಷ್ಯನ ನೋವಿಗೆ ಸ್ಪಂದಿಸುವ ಒಂದು ಪವಿತ್ರ ಸೇವೆ.

ವಿಶೇಷವಾಗಿ ಆಯುರ್ವೇದದ ಮೂಲಕ ಗ್ರಾಮೀಣ ಭಾಗದ ಬಡ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸುವುದು ನನ್ನ ಜವಾಬ್ದಾರಿ. ಈ ಸನ್ಮಾನವು ನನಗೆ ಮುಂದಿನ ದಿನಗಳಲ್ಲಿ ಇನ್ನಷ್ಟು ಬದ್ಧತೆಯಿಂದ ಸೇವೆ ಸಲ್ಲಿಸಲು ಹೊಸ ಉತ್ಸಾಹ ಮತ್ತು ಪ್ರೇರಣೆಯನ್ನು ನೀಡಿದೆ. ನನ್ನ ಈ ಕೆಲಸದಲ್ಲಿ ನಿರಂತರ ಸಹಕಾರ ನೀಡುತ್ತಿರುವ ನನ್ನ ಆಸ್ಪತ್ರೆಯ ಸಹೋದ್ಯೋಗಿಗಳಿಗೂ ಈ ಗೌರವ ಸಲ್ಲಬೇಕು. ನಮ್ಮ ಗ್ರಾಮದ ಆರೋಗ್ಯ ಸುಧಾರಣೆಯೇ ನಮ್ಮೆಲ್ಲರ ಗುರಿಯಾಗಲಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿ ಸರೋಜ ಕಮಲ ಬಸವರಾಜ್ ಸೋಮು ಸೇರಿದಂತೆ ಟ್ರಸ್ಟಿನ ಪದಾಧಿಕಾರಿಗಳು ಇದ್ದರು.

ವರದಿ : ಜಿಲಾನಸಾಬ್ ಬಡಿಗೇರ್

## ಮುಧೋಳದಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ ಜಾಥಾ

ನೈಜ್ಯ ದೆಸೆ ನ್ಯೂಸ್

**ಮುಧೋಳ: ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಮುಧೋಳ ನಗರದಲ್ಲಿ ಬೃಹತ್ ಜಾಗೃತಿ ಜಾಥಾ ನಡೆಯಿತು. ಬಾಗಲಕೋಟೆ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಜಮಖಂಡಿ ಉಪ ವಿಭಾಗದ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಧೋಳ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ, ಜಿಲ್ಲಾ ಎಸ್ಪಿ, ಡಿವೈಎಸ್ಪಿ, ಸಿಪಿಐ, ಶಾಲಾ ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.**



ವಿದ್ಯಾರ್ಥಿಗಳು ಕೈಯಲ್ಲಿ ಬ್ಯಾನರ್ ಹಾಗೂ ಫಲಕಗಳನ್ನು ಹಿಡಿದು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು. "ಬೇಡ ತಂಬಾಕು, ಬೇಡ ಡ್ರಗ್ಸ್", "ನಶಾ ಮುಕ್ತ ಸಮಾಜ ನಿರ್ಮಿಸೋಣ" ಎಂದು ಘೋಷಣೆ ಕೂಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಧಿಕಾರಿಗಳು, ಯುವ ಜನತೆ ಮಾದಕ ವ್ಯಸನಕ್ಕೆ ಬಲಿಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಡ್ರಗ್ಸ್, ತಂಬಾಕು ಸೇವನೆಯಿಂದ ಆರೋಗ್ಯ ಹಾಗೂ ಕುಟುಂಬದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮನವ-ರಿಕೆ ಮಾಡಿಕೊಟ್ಟರು. ಶಾಲಾ ಹಂತದಿಂದಲೇ ನಶಾ ಮುಕ್ತಿ ಬಗ್ಗೆ ಜಾಗೃತಿ ಅಗತ್ಯ ಎಂದು ಶಿಕ್ಷಣಾಧಿಕಾರಿಗಳು ತಿಳಿಸಿದರು. ಪೊಲೀಸ್ ಇಲಾಖೆ ವತಿಯಿಂದ ಮಾದಕ ವಸ್ತು ಮಾರಾಟ ಹಾಗೂ ಸೇವನೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಸ್ಪಿ ಎಚ್ಚರಿಕೆ ನೀಡಿದರು. ಸಾರ್ವಜನಿಕರು ಇಂತಹ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಕೋರಿದರು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ನಶಾ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಜ್ಞೆ ಸ್ವೀಕರಿಸಿದರು.

## ರಾಯಚೂರು ಪಲ್ಸ್ ಪೋಲಿಯೊ ಶೇಖಡಾ 100 ಸಾಧನೆ- ಯಶಸ್ವಿಗೆ ಸಹಕರಿಸಿದ ಎಲ್ಲರಿಗೂ ಅಭಿನಂದನೆ

ನೈಜ್ಯ ದೆಸೆ ನ್ಯೂಸ್

**ಕಳೆದ 15 ವರ್ಷಗಳಿಂದ ದೇಶದಲ್ಲಿ ಶೂನ್ಯ ಪೋಲಿಯೊ ಪ್ರಕರಣ ಸಾಧನೆ ಹಾಗೂ ಪೋಲಿಯೊ ಮೇಲಿನ ನಮ್ಮ ವಿಜಯವನ್ನು ಮುಂದುವರೆಸಲು ರಾಯಚೂರು ಜಿಲ್ಲೆಯಾದ್ಯಂತ ಜೂನ್ 28 ರಂದು ಬೂತ್ ದಿನ ಹಾಗೂ ಮನೆ ಬೇಟಿಯ ಮೂಲಕ ಹುಟ್ಟಿನಿಂದ ಐದು ವರ್ಷದೊಳಗಿನ ಎಲ್ಲ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕುವ ಗುರಿಯನ್ನು ಶೇ 100% ಸಾಧನೆಯೊಂದಿಗೆ ಯಶಸ್ವಿಗೊಳಿಸಲಾಗಿದೆ ಎಂದು ರಾಜ್ಯ ನೋಡಲ್ ಅಧಿಕಾರಿ ಹಾಗೂ ಉಪ ನಿರ್ದೇಶಕರು ವಿಭಾಗೀಯ ಆರೋಗ್ಯ ಸೇವೆಗಳ ನಿರ್ದೇಶನಾಲಯ ಕಲಬುರಗಿ ಡಾ ಎ ಎಸ್ ರುದ್ರವಾಡಿ ತಿಳಿಸಿದ್ದಾರೆ.**

ಕಾರ್ಯಕ್ರಮದ ಕೊನೆಯ ದಿನದಂದು ರಾಷ್ಟ್ರೀಯ ವೈದ್ಯರ ದಿನವು ಇದ್ದುದ-



ರಿಂದ ವೈದ್ಯರ ನಿಸ್ವಾರ್ಥ ಸೇವೆಗೆ ಎಲ್ಲರೂ ಗೌರವ ಸಲ್ಲಿಸುವ ಈ ಸಂದರ್ಭದಲ್ಲಿ, ಮಕ್ಕಳ ಅಂಗವಿಕಲತೆ ತಡೆಯುವ ಪಲ್ಸ್ ಪೋಲಿಯೊ ಕಾರ್ಯಕ್ರಮದ ಯಶಸ್ವಿಗೆ ಬೆನ್ನುಲುಬಾಗಿ ಮಾರ್ಗದರ್ಶನ ನೀಡಿದ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ, ತಾಲೂಕಾ ಅಡಳಿತ, ಸ್ಥಳೀಯ ಸಂಸ್ಥೆಗಳು, ಎಲ್ಲ ಇಲಾಖೆಗಳ ಅಧಿಕಾರಿಗಳು, ವೈದ್ಯಕೀಯ, ಪ್ಯಾರಾ ಮೆಡಿಕಲ್ ಕಾಲೇಜು ಮುಖ್ಯಸ್ಥರು, ರಸ್ತೆ ಸಾರಿಗೆ ಸಂಸ್ಥೆ, ರೈಲ್ವೆ ಇಲಾಖೆ, ಇಲಾಖೆಯ ವೈದ್ಯರು, ಸಿಬ್ಬಂದಿಯವರು, ವಿವಿಧ ಸಂಘ ಸಂಸ್ಥೆಗಳಿಗೆ, ವ್ಯಾಪಕ ಪ್ರಚಾರ ಮಾಡಿದ ಮಾಧ್ಯಮ ಪ್ರತಿನಿಧಿಗಳಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಜವಾಬ್ದಾರಿ ನಿರ್ವಹಿಸಿದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು, ಪೋಲಿಯೊ ಅನುಷ್ಠಾನ ಅಧಿಕಾರಿ ಹಾಗೂ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಾ ಗಣೇಶ್ ಡಾ ಶಿವಕುಮಾರ ನಾರಾ, ಕೆ, ಡಾ ಮಹಮ್ಮದ್ ಶಾಕೀರ್, ಡಾ ಚಂದ್ರಶೇಖರಯ್ಯ, ಟಿಹೆಚ್‌ಓ ಡಾ ಅಮೃತ ಹುಕ್ಕೆರಿ, ಸೇರಿದಂತೆ ವೈದ್ಯಾಧಿಕಾ-ರಿಗಳು, ಡಿಹೆಚ್‌ಇಓ, ಡಿಪಿಎಮ್, ಡಿಡಿ-ಎಮ್, ಎಮ್‌ಆಯಂಡ್‌ಇ, ಸೇ-ರಿದಂತೆ ಸಿಬ್ಬಂದಿಯರು ಉಪಸ್ಥಿತರಿದ್ದರು.

# ಸನ್ ರೈಸ್ ಕಾಲೇಜಿನಿಂದ ರಾಷ್ಟ್ರೀಯ ವೈದ್ಯರ ದಿನ ಆಚರಣೆ

## ಸನ್ ರೈಸ್ ಕಾಲೇಜಿನಿಂದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆ ವೈದ್ಯರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಭಾರತದ ಖ್ಯಾತ ವೈದ್ಯ, ಶಿಕ್ಷಣ ತಜ್ಞ ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಯಾಗಿದ್ದ ಡಾ. ಬಿಧಾನ್ ಚಂದ್ರ ರಾಯ್ ಅವರ ಸ್ಮರಣಾಥ-ರ್ ಆಚರಿಸಲಾಗುವ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಸನ್ ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್ ವತಿಯಿಂದ ಸಿಂಧನೂರಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.**


ಕಾರ್ಯಕ್ರಮದಲ್ಲಿ ವೈದ್ಯರಿಗೆ ಶಾಲು ಹೊದಿಸಿ, ಹಾರ ಹಾಕಿ, ಕೇಕ್ ಕತ್ತರಿಸುವ ಮೂಲಕ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಆರೋಗ್ಯ ಕ್ಷೇತ್ರದಲ್ಲಿ ವೈದ್ಯರು ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಅವ-ರಿಗೆ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಕಾವೇರಿ ಮಾತನಾಡಿ, "ನಾವು ವೈದ್ಯರು ದೇವರಲ್ಲ. ಆದರೆ ಪ್ರತಿಯೊಬ್ಬ ರೋಗಿಗೂ ನಮ್ಮ ಕೈಲಾದಷ್ಟು ಅತ್ಯುತ್ತಮ ಚಿಕಿತ್ಸೆ ನೀಡಲು ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ. ಗುಣಮುಖವಾಗುವ ಪ್ರತಿಫಲವನ್ನು ದೇವರೇ ನೀಡುತ್ತಾನೆ. ವೈದ್ಯಕೀಯ ಕ್ಷೇತ್ರದಲ್ಲಿ ಪ್ರತಿದಿನವೂ




ಹೊಸ ಜ್ಞಾನವನ್ನು ಕಲಿಯುವ ಅವಕಾಶವಿದ್ದು, ಅದನ್ನು ಅಳವಡಿಸಿಕೊಂಡು ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ನೀಡುವುದು ನಮ್ಮ ಕರ್ತವ್ಯವಾಗಿದೆ. ರಾಷ್ಟ್ರೀಯ ವೈದ್ಯರ ದಿನಾಚರಣೆಯಂದು ಆಸ್ಪತ್ರೆಗೆ ಆಗಮಿಸಿ ನಮ್ಮೆಲ್ಲ ವೈದ್ಯರನ್ನು ಸನ್ಮಾನಿಸಿರುವುದು ನಮಗೆ ತುಂಬಾ ಸಂತೋಷ ತಂದಿದೆ," ಎಂದು ಹೇಳಿದರು.

ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಪ್ರಾಚಾರ್ಯ ಲಾಜರ್ ಸಿರಿಲ್ ಮಾತನಾಡಿ, "ವೈದ್ಯ ವೃತ್ತಿ ಕೇವಲ ಉದ್ಯೋಗವಲ್ಲ, ಅದು ಮಾನವೀಯತೆಯ ಅತ್ಯುನ್ನತ ಸೇವೆಯಾಗಿದೆ. ವೈದ್ಯರು ಹಗಲು-ರಾತ್ರಿ ಎನ್ನದೆ ರೋಗಿಗಳ ಜೀವ ಉಳಿಸಲು











ಶ್ರಮಿಸುತ್ತಾರೆ. ಸಮಾಜ ಆರೋಗ್ಯವಂತರಾಗಿರಲು ವೈದ್ಯರ ಸೇವೆ ಅಮೂಲ್ಯವಾಗಿದೆ. ವೈದ್ಯರ ತ್ಯಾಗ, ಪರಿಶ್ರಮ ಮತ್ತು ಸೇವಾ ಮನೋಭಾವಕ್ಕೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನರ್ಸಿಂಗ್ ವಿದ್ಯಾರ್ಥಿಗಳು ವೈದ್ಯರ ಸೇವಾ ಮನೋಭಾವ, ಶಿಸ್ತು, ಕರುಣೆ ಹಾಗೂ ವೃತ್ತಿನಿಷ್ಠೆಯನ್ನು ಆದರ್ಶವಾಗಿ ಅಳವಡಿಸಿಕೊಂಡು ಭವಿಷ್ಯದಲ್ಲಿ ಗುಣಮಟ್ಟದ ಆರೋಗ್ಯ ಸೇವೆ ನೀಡುವ ಆರೋಗ್ಯ ವೃತ್ತಿಪರರಾಗಬೇಕು," ಎಂದು ತಿಳಿಸಿದರು.

ನರ್ಸಿಂಗ್ ಉಪನ್ಯಾಸಕ ವೀರೇಶ್ ಮಾತನಾಡಿ, "ವೈದ್ಯರು ಸಮಾಜದ ಆರೋಗ್ಯ ರಕ್ಷಕರು. ಅನಾರೋಗ್ಯದ ಸಮಯದಲ್ಲಿ ಆಶಾಕಿರಣವಾಗಿ ನಿಂತು ಜೀವ ಉಳಿಸುವ ಅವರ ಸೇವೆ ಅನನ್ಯವಾಗಿದೆ. ರೋಗಿಯ ನೋವನ್ನು ತಮ್ಮದೇ ನೋವಿನಂತೆ ಭಾವಿಸಿ ಚಿಕಿತ್ಸೆ ನೀಡುವ ವೈದ್ಯರ ಸೇವೆ ಅತ್ಯಂತ ಶ್ರೇಷ್ಠವಾದ ಮಾನವೀಯ ಸೇವೆಯಾಗಿದೆ. ವೈದ್ಯರ ನಿಸ್ವಾರ್ಥ ಸೇವೆ, ತ್ಯಾಗ ಮತ್ತು ಕರ್ತವ್ಯನಿಷ್ಠೆಯನ್ನು ಸಮಾಜ ಸದಾ ಗೌರವಿಸಬೇಕು. ರಾಷ್ಟ್ರೀಯ ವೈದ್ಯರ ದಿನಾಚರಣೆಯು ವೈದ್ಯರ ಅಮೂಲ್ಯ ಕೊಡುಗೆಯನ್ನು ಸ್ಮರಿಸಿ ಅವರಿಗೆ ಕೃತಜ್ಞತೆ ಸಲ್ಲಿಸುವ ಮಹತ್ವದ ದಿನವಾಗಿದೆ," ಎಂದು ಹೇಳಿದರು.

ಬಳಿಕ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಯ ಎಲ್ಲಾ ವೈದ್ಯರನ್ನು ಶಾಲು, ಹಾರ ಹಾಕಿ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮವನ್ನು ನರ್ಸಿಂಗ್ ಉಪನ್ಯಾಸಕ ವೀರೇಶ್ ಅವರು ನಿರೂಪಿಸಿದರು. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮವನ್ನು ನರ್ಸಿಂಗ್ ಉಪನ್ಯಾಸಕಿ ಕು. ಶೋಭಾ ಅವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸನ್ ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಕಾರ್ಯದರ್ಶಿ ಇರ್ಷಾದ್ ಕೆ. ಅತ್ತಾರ್, ಪ್ರಾಚಾರ್ಯ ಲಾಜರ್ ಸಿರಿಲ್, ನರ್ಸಿಂಗ್ ಉಪನ್ಯಾಸಕ ವೀರೇಶ್, ನರ್ಸಿಂಗ್ ಉಪನ್ಯಾಸಕಿ ಕು. ಶೋಭಾ, ಹಿರಿಯ ನರ್ಸಿಂಗ್ ಅಧಿಕಾರಿಗಳು, ಹಾಗೂ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್‌ನ ತೃತೀಯ ವರ್ಷದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.